ಅಧ್ಯಕ್ಷರು : ಇವತ್ತೇ ಲೇ ಮಾಡುತ್ತಾರೆ.

ಶ್ರೀ ಆರಗ ಜ್ಞಾನೇಂದ್ರ : ನಿನ್ನೆಯ ಸ್ಟಾರ್ಡ್ ಕೊಶ್ಚನ್ ಮುಂದೆ ಹಾಕಿ ಇಡಬೇಕು.

ಅಧ್ಯಕ್ಷರು : ಸ್ಟಾರ್ಡ್ ಕೊಶ್ಚನ್ ಮುಂದೆ ಹಾಕಬೇಕು ಕರೆಕ್ಟ್. ಶೆಟ್ಟರ್‌ರವರೇ ತಾವು ಪ್ರಾರಂಭ ಮಾಡಿ.

** ಅನುಬಂಧ – I

4. ನಿಯಮ 159ರ ಮೇರೆಗೆ ಮಂಡಿಸಿದ ಪ್ರಸ್ತಾವನೆ ಮೇಲೆ ಚರ್ಚೆ

ವಿಷಯ:– ಬರಗಾಲ ಪರಿಸ್ಥಿತಿಗೆ ಸಂಬಂಧಪಟ್ಟ ಪ್ರಸ್ತಾವನೆ ಮೇಲಿನ ಚರ್ಚೆ

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಒಂದು ರಾಜ್ಯದಲ್ಲಿ ಇರುವಂತಹ ಬರದ ಪರಿಸ್ಥಿತಿ ಕಳೆದ ಎರಡು ವರ್ಷದಿಂದ ಇದ್ದು, ನಮ್ಮ ರೈತ ಸಮುದಾಯಬರದ ಒಂದು ಭವಣೆಯನ್ನು ಅನುಭವಿಸಿದ್ದು, ಈ ವರ್ಷ ಎಲ್ಲೋ ಒಂದಿಷ್ಟು ಮಳೆಯಾಗಿ, ಈ ಸಲ ಬರದ ಪರಿಸ್ಥಿತಿ ಹೋಗುತ್ತದೆ, ನಮ್ಮ ರೈತ ಜೀವನಕ್ಕೆ ಅನುಕೂಲವಾಗುತ್ತದೆ ಎಂದು ಒಂದಿಷ್ಟು ಆಶಾಭಾವನೆ ಮೂಡಿತ್ತು. ಕೆಲವು ಜಿಲ್ಲೆಗಳಲ್ಲಿ, ಕೆಲವು ತಾಲ್ಲೂಕುಗಳಲ್ಲಿ ಅಲ್ಪಸ್ವಲ್ಪ ಮಳೆ ಬಂದು ನಂತರ ಇತ್ತೀಚಿನ ದಿನಗಳಲ್ಲಿ ನೋಡಿದಾಗ ಕಳೆದ ಎರಡು ವರ್ಷಕ್ಕಿಂತ ಅತ್ಯಂತ ಭೀಕರ ಬರಗಾಲ ಪರಿಸ್ಥಿತಿ ಮುಂದುವರೆಯುವಂತಹ ಎಲ್ಲಾ ಲಕ್ಷಣಗಳು ಇವೆ, ಮುಂದುವರೆಯುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳಬೇಕಾಗಿತ್ತು, ಬರಗಾಲ ಕಾಮಗಾರಿಗಳು ಎಷ್ಟೊಂದು ತೀವ್ರಗತಿಯಿಂದ ನಡೆಯಬೇಕಾಗಿತ್ತು ಹಾಗೂ ಪ್ರಾಮಾಣಿಕವಾಗಿ ಅನುಷ್ಠಾನವಾಗ ಬೇಕಾಗಿತ್ತು. ಅದರ ಕೊರತೆ ಇವತ್ತು ಎಲ್ಲಾ ಕಡೆ ಕಂಡು ಬರುತ್ತಿದೆ. ಬಹುಶಃ ನನಗೆ ಅನ್ನಿಸುತ್ತಿದೆ, ನಮ್ಮ ರೈತ ಸಮುದಾಯ ಇವತ್ತು ಏನು ಅಧೋಗತಿಗೆ ಹೋಗಿದ್ದಾರೆ, ಆರ್ಥಿಕವಾಗಿ ದುಸ್ಥಿತಿಗೆ ಹೋಗಿದ್ದಾರೆ ಬಹುಶಃ ಇನ್ನು 15 ವರ್ಷದವರೆಗೆ ಆ ಒಂದು ಆರ್ಥಿಕ ದುಸ್ಥಿತಿಯಿಂದ ಮೇಲೇಳುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಪರಿಸ್ಥಿತಿ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಮೂಡುತ್ತಿದೆ. ನಾನು ಕಳೆದ ಒಂದೆರಡು ತಿಂಗಳಲ್ಲಿ 15–20 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ಬಂದಿದ್ದೇನೆ. ನೂರಾರು ಗ್ರಾಮಗಳಿಗೆ ಭೇಟಿ ಕೊಟ್ಟಿದ್ದೇನೆ. ಈ ಬರಗಾಲ ಕಾಮಗಾರಿಗಳು ಎಲ್ಲಿ ನಡೆಯುತ್ತಿವೆ ಅಲ್ಲಿ ಪ್ರತ್ಯಕ್ಷವಾಗಿ ನೋಡಿಕೊಂಡು ಬಂದಿದ್ದೇನೆ. ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ವಿಚಾರ ಮಾಡಿದ್ದೇವೆ. ಆದರೆ ರಾಜ್ಯ ಸರ್ಕಾರ ಏನು ಮಾಡುತ್ತಿದೆ? ನಮ್ಮ ಮಂತ್ರಿಗಳು ಏನು ಮಾಡುತ್ತಿದ್ದಾರೆ? ನಮ್ಮ ಮುಖ್ಯಮಂತ್ರಿಗಳು ಎಲ್ಲಿ ಈ ಬರಗಾಲದ ಕಾಮಗಾರಿಯು ವೀಕ್ಷಣೆಗೆ ಹೋದರು? ಇದನ್ನೆಲ್ಲಾ ನೋಡಿದಾಗ ನಮ್ಮ ರಾಜ್ಯಸರ್ಕಾರದ ಕಾರ್ಯವೈಖರಿ ಬಗ್ಗೆ ಬಹಳಷ್ಟು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ. ಈ ಬರಗಾಲದ ದುಸ್ಥಿತಿ ಬಗ್ಗೆ ಗ್ರಾಮೀಣ ಜನರ ಬಗ್ಗೆ ನಮ್ಮ ರಾಜ್ಯ ಸರ್ಕಾರ ಎಳ್ಳಷ್ಟೂ ಕಾಳಜಿ ವಹಿಸಿಲ್ಲ ಎನ್ನುವುದು ಕಂಡುಬರುತ್ತಿದೆ. ಸದನ ಇನ್ನೇನು ನಾಲ್ಕೈದು ದಿವಸದಲ್ಲಿ ಪ್ರಾರಂಭವಾಗಬೇಕು, ಆಗ ಕೆಲವು ಮಾನ್ಯ ಮಂತ್ರಿಗಳು ಹೆಲಿಕಾಪ್ಟರ್ ಮುಖಾಂತರ ಈ ಬರಗಾಲದ ಕಾಮಗಾರಿ ವೀಕ್ಷಣೆ ಮಾಡಿದರು. ಅವರು ಮಾನ್ಯ ಮಲ್ಲಿಕಾರ್ಜುನ ಖರ್ಗೆ, ಮಾನ್ಯ ಡಿ.ಕೆ. ಶಿವಕುಮಾರ್, ಮಾನ್ಯ ಪೋರ್ಪಡೆ ಹಾಗೂ ಮಾನ್ಯ ಶ್ರೀಕಂಠಯ್ಯನವರು. ಇನ್ನೇನು ಸದನ ಇನ್ನೊಂದು ವಾರದಲ್ಲಿ ದಿನಾಂಕ: 9 ರಂದು ಪ್ರಾರಂಭವಾಗುತ್ತದೆ ಎಂದಾಗ 5–6ನೇ ತಾರೀಖಿಗೆ ಇವರು ಹೆಲಿಕಾಪ್ಟರ್ ಪ್ರಯಾಣ ಚಾಲು ಆಯಿತು. ಹೆಲಿಕಾಪ್ಟರ್ ಮುಖಾಂತರ ವೀಕ್ಷಣೆ ಮಾಡುವಂತಾದ್ದನ್ನು ನಾವು ನೋಡಿದ್ದೇವೆ. ಕೆಲವೊಂದು

ರಾಜ್ಯಗಳಲ್ಲಿ ಕೆಲವು ಪ್ರಮುಖರು ಹೋಗಿ ನೋಡುವಂತಾದ್ದು, ಅಲ್ಲಿರುವಂತಹ ಮುಖ್ಯಮಂತ್ರಿಗಳು ನೋಡುವಂತಾದ್ದು ನೋಡುತ್ತೇವೆ. ಮಾನ್ಯ ಪ್ರಧಾನಮಂತ್ರಿಗಳೂ ಸಹ ಈ ಹೆಲಿಕಾಪ್ಟರ್ ಮುಖಾಂತರ ಅಥವಾ ವಿಮಾನದ ಮುಖಾಂತರ ವೀಕ್ಷಣೆ ಮಾಡುತ್ತಾರೆ. ಯಾವಾಗ ಎಂದರೆ ಇದನ್ನು ಅತಿವೃಷ್ಟಿ ಆದಂತಹ ಸಂದರ್ಭದಲ್ಲಿ ನಾವು ನೋಡುತ್ತಿದ್ದೇವೆ. ನಮ್ಮ ರಾಜ್ಯದಲ್ಲಿ ಅತಿವೃಷ್ಟಿ ಇಲ್ಲ, ಮೂರು ವರ್ಷದಿಂದ ನೀರಿಲ್ಲ. ಕುಡಿಯುವ ನೀರಿಗೆ ತೊಂದರೆಯಾಗಿದೆ. ಇಡೀ ರಾಜ್ಯದಲ್ಲಿರುವಂತಹ ಕೆರೆಗಳೆಲ್ಲಾ ಬತ್ತಿಹೋಗಿವೆ. ಹಾಗಾಗಿ ಇವತ್ತು ಆ ಬತ್ತಿದ ಕೆರೆಗಳನ್ನು ಹೆಲಿಕಾಪ್ಟರ್ ಮುಖಾಂತರ ನೋಡುವುದಕ್ಕೆ ಹೋದರೋ, ಹೊಲದಲ್ಲಿ ಬತ್ತಿ ನಾಶವಾಗಿ ಎಲ್ಲಿ ಸ್ವಲ್ಪ ಬೆಳೆದಿದ್ದಾರೆ, ಕಬ್ಬು ಒಣಗಿ ಹೋಗಿದೆ, ಬೇರೆ ಬೇರೆ ಬೆಳೆಗಳು ಒಣಗಿ ಹೋಗಿದೆ, ಆ ಬೆಳೆಗಳನ್ನು ಹೆಲಿಕಾಪ್ಟರ್ ಮೂಲಕ ನೋಡುವುದಕ್ಕೆ ಹೋದರೆ ಹೇಗೆ? ನಮಗೆ ಅರ್ಥವಾಗುತ್ತಿಲ್ಲ. ನಿಜವಾಗಿ ಸರ್ಕಾರಕ್ಕೆ ಕಾಳಜಿ ಇದ್ದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ನಿಜವಾಗಿ ಕಾಳಜಿ ಇದ್ದರೆ ಕಳೆದ ಎರಡು ತಿಂಗಳಿಂದ ನಿಮ್ಮ ಪ್ರವಾಸ ಪ್ರಾರಂಭವಾಗಬೇಕಿತ್ತು. ಪ್ರತಿಯೊಂದು ಜಿಲ್ಲೆಗೆ ಹೋಗಿ ಕುಳಿತುಕೊಳ್ಳಬೇಕಾಗಿತ್ತು. ನಮ್ಮ ರೆವಿನ್ಯೂ ಸಚಿವರು ಮತ್ತು ಬರಗಾಲ ಕಾಮಗಾರಿ ಬಗ್ಗೆ ಮಾನ್ಯ ಖರ್ಗೆಯವರು ಉಸ್ತುವಾರಿ ಸಚಿವರು ಇದ್ದಾರೆ. ಅವರು ಸಹ ಪ್ರತಿಯೊಂದು ಜಿಲ್ಲೆಗೆ ಮತ್ತು ತಾಲ್ಲೂಕು ಮಟ್ಟದವರೆಗೆ ಹೋಗಬೇಕಾಗಿತ್ತು. ಸರ್‌ಪ್ರೈಜ್ ಆಗಿ ಕೆಲವೊಂದು ತಾಲ್ಲೂಕುಗಳಲ್ಲಿ ಹಾಗೂ ಗ್ರಾಮಗಳಿಗೆ ಭೇಟಿ ಕೊಡಬೇಕಾಗಿತ್ತು. ಅದನ್ನು ಯಾವುದನ್ನೂ ಮಾಡಲಿಲ್ಲ. ಇನ್ನು ಸದನದಲ್ಲಿ ಇದೆಲ್ಲಾ ವಿಷಯ ಪ್ರಸ್ತಾಪವಾಗುತ್ತದೆ. ಚರ್ಚೆಯಾಗುತ್ತದೆ ಎಂದು ತಿಳಿದುಕೊಂಡು ಈಗ ನಾಲ್ಕೈದು ದಿವಸ ಹೆಲಿಕಾಪ್ಟರ್‌ನಲ್ಲಿ ಪ್ರವಾಸ ಮಾಡಿಕೊಂಡು ಬಂದರು. ಬೆಳಗಾವಿ ಜಿಲ್ಲೆಗೆ ಹೋಗಿದ್ದರು. ಬೆಳಗಾವಿ ಒಂದು ದೊಡ್ಡ ಜಿಲ್ಲೆ. ಕೇವಲ ಅಲ್ಲಿ ಮೂರ್ನಾಲ್ಕು ಗಂಟೆ ಹೋಗಿ ಒಂದೆರಡು ಕಾಮಗಾರಿ ನೋಡಿಕೊಂಡು ಬಂದರು. ನಮ್ಮ ಕೃಷಿ ಸಚಿವರು ಕೆಲವು ಕಡೆ ಹೋಗಿದ್ದರು. ಗುಲ್ಬರ್ಗಕ್ಕೂ ಹೋದರು, ಅಲ್ಲಿ ಕೇವಲ ಒಂದೆರಡು ಗಂಟೆ ಹೋಗಿ ಅಧಿಕಾರಿಗಳಿಂದ ಮಾಹಿತಿ ತೆಗೆದುಕೊಳ್ಳುವಂಥಾದ್ದು. ಅಧಿಕಾರಿಗಳ ಹತ್ತಿರ ಮಾಹಿತಿಯೆಲ್ಲಾ ರೆಡಿ ಇರುತ್ತದೆ. ಇವತ್ತು ನೂರು ಕಾಮಗಾರಿಯನ್ನು ಮಾಡಿದ್ದೇವೆ. ಇದಕ್ಕೆ ಇಷ್ಟೊಂದು ಖರ್ಚು ಮಾಡಿದ್ದೇವೆ, ಎಲ್ಲಾ ಸರಿಯಿದೆ ಎಂದು ರಿಪೋರ್ಟ್ ಕೊಡುತ್ತಾರೆ. ಆದರೆ ನಿಜವಾಗಿ ಗ್ರಾಮೀಣ ಪ್ರದೇಶದಲ್ಲಿ ಎಲ್ಲಿ ಬರಗಾಲ ಕಾಮಗಾರಿ ನಡೆದಿದೆ ಅಲ್ಲಿಗೆ ಹೋಗಿ ನಾವು ನೋಡಬೇಕು. ನಿಜ ಪರಿಸ್ಥಿತಿ ಏನು ಎನ್ನುವುದು ನೋಡಿದಾಗ ತಮಗೆ ಗೊತ್ತಾಗುತ್ತದೆ. ಇವತ್ತು ರೈತರು ತೊಂದರೆಯಲ್ಲಿದ್ದಾರೆ, ಕೃಷಿ ಕಾರ್ಮಿಕರಿಗೆ ಕೈಗೆ ಕೆಲಸ ಇಲ್ಲವೆಂದು ಹೇಳಿ ಬೇರೆ ಬೇರೆ ರಾಜ್ಯಗಳಿಗೆ ಎಂದರೆ ಗೋವಾ, ಮಹಾರಾಷ್ಟ್ರ, ಮುಂಬೈ ಇರಬಹುದು ಇನ್ನಿತರ ರಾಜ್ಯಗಳಿಗೆ, ಬೆಂಗಳೂರಿನಂತಹ ದೊಡ್ಡ ನಗರಗಳಿಗೆ ನಮ್ಮ ರೈತ ಕೃಷಿ ಕಾರ್ಮಿಕರು ಗುಳೆ ಹೋಗುತ್ತಿದ್ದಾರೆ. ಇವತ್ತು ಕೇಂದ್ರ ಸರ್ಕಾರ ಏಳು ಲಕ್ಷ ಮೆಟ್ರಿಕ್ ಟನ್ ಅಷ್ಟು ಉಚಿತವಾಗಿ ಅಕ್ಕಿಯನ್ನು ಕಳುಹಿಸಿಕೊಟ್ಟರು. 250 ಕೋಟಿ ರೂಪಾಯಿಗಿಂತ ಹೆಚ್ಚು ಹಣವನ್ನು ಈ ಬರಗಾಲ ಕಾಮಗಾರಿ ಸಲುವಾಗಿ ಕೊಟ್ಟರು. ಹಾಗಾದರೆ ಅದನ್ನು ಸರಿಯಾಗಿ ಉಪಯೋಗ ಮಾಡಿದರೋ ಹೇಗೆ? ಏಕೆ ಸರಿಯಾಗಿ ಉಪಯೋಗವಾಗಲಿಲ್ಲ? ನಾನೇ ಪ್ರತ್ಯಕ್ಷ ನೋಡಿದ್ದೇನೆ. ಎಷ್ಟೋ ತಾಲ್ಲೂಕು ಹಾಗೂ ಗ್ರಾಮಗಳಿಗೆ ಹೋಗಿದ್ದೇನೆ. ಆ ಬರಗಾಲ ಕಾಮಗಾರಿಗಳಲ್ಲಿ ಅವ್ಯವಹಾರಗಳು, ಕೋಟ್ಯಾಂತರ ರೂಪಾಯಿ ಲೂಟಿ ನಡೆಯುತ್ತಿದೆ, ಭ್ರಷ್ಟಾಚಾರ ನಡೆಯುತ್ತಿದೆ. ಇವತ್ತು ರೈತನನ್ನು ಉದ್ಧಾರ ಮಾಡುವಂಥಾದ್ದು, ರೈತನಿಗೆ ಅನುಕೂಲ ಮಾಡುವಂತಹ

ಕೆಲಸವನ್ನು ಮಾಡಬೇಕಾದರೆ ಅದಕ್ಕೆ ವ್ಯತಿರಿಕ್ತವಾಗಿ ಈ ರೀತಿ ಬರಗಾಲ ಕಾಮಗಾರಿಗಳಲ್ಲಿ ದಿನನಿತ್ಯ ನಡೆಯುತ್ತಿದೆ. ಬೇರೆ ಬೇರೆ ಇಲಾಖೆಗಳಲ್ಲಿ ಭ್ರಷ್ಟಾಚಾರ, ಅವ್ಯವಹಾರಗಳು ದಿನನಿತ್ಯ ನಡೆಯುತ್ತಿದೆ. ಆದರೆ ಇವತ್ತು ಬರಗಾಲ ಕಾಮಗಾರಿಯಿಂದ ರೈತರಿಗೆ, ಜನರಿಗೆ ಹೋಗಿ ಮುಟ್ಟುವಂತಹ ಆ ಪ್ರತಿಫಲ ಅಕ್ಕಿಯಾಗಲಿ, ಆ ಹಣ ಅವರ ಕೈಗೆ ಹೋಗುತ್ತಿಲ್ಲ. ಅದರಲ್ಲೂ ಅವ್ಯವಹಾರ. ನಾನು ಹೇಳುತ್ತಿದ್ದೇನೆ. ಈ ರೀತಿ ರೈತರ ಹೊಟ್ಟೆಗೆ ಹೊಡೆದು, ನೀವು ಅದರಲ್ಲಿ ಅವ್ಯವಹಾರ ಮಾಡಿದ್ದೀರಿ. ಭ್ರಷ್ಟಾಚಾರ ಮಾಡಿದ್ದೀರಿ. ಇದನ್ನು ಯಾರೂ ಕ್ಷಮಿಸಲಾರರು ಎಂದು ಹೇಳಬೇಕಾಗುತ್ತದೆ. ಇದನ್ನು ದೇವರು ಕ್ಷಮಿಸಲಾರನು. ಅದಕ್ಕೆ ತಕ್ಕ ಪಾಠವನ್ನು ಈ ಸರ್ಕಾರ ಕಲಿಯುತ್ತದೆ. ನಾನು, ಸರ್ಕಾರಕ್ಕೆ ಮಾನ್ಯ ಮುಖ್ಯಮಂತ್ರಿಗೆ ಪತ್ರ ಬರೆದಿದ್ದೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್) ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

1.50 ಪಿ.ಎಂ.

ಯಾವ ಅಧಿಕಾರಿಗಳು ತಪ್ಪು ಮಾಡಿದ್ದಾರೆ, ರಾಜಕಾರಣಿಗಳು ಯಾರು ತಪ್ಪು ಮಾಡಿದ್ದಾರೆ, ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವಂಥಾದ್ದು ಎಂದು ಪತ್ರವನ್ನು ಬರೆದಿದ್ದೇವೆ, ಕೋಟ್ಯಾಂತರ ರೂಪಾಯಿಗಳು ಲೂಟಿಯಾಗುತ್ತಿದೆ, ಇದೆಲ್ಲಾ ಲೂಟಿಯಾದ ಮೇಲೆ ಮಾನ್ಯ ಮಂತ್ರಿಯವರು ಬರಗಾಲ ವೀಕ್ಷಣೆಯ ಸಲುವಾಗಿ ಹೋದರು. ಅಂದರೆ ಊರೆಲ್ಲಾ ಲೂಟಿಯಾದ ಮೇಲೆ ಕೋಟೆಯ ಬಾಗಿಲು ಹಾಕಿದರು ಎಂಬ ರೀತಿಯಲ್ಲಿ ಬರಗಾಲ ಕಾಮಗಾರಿಯಲ್ಲಿ ಕೋಟ್ಯಾಂತರ ರೂಪಾಯಿಗಳ ಲೂಟಿಯಾದ ಮೇಲೆ ಇವರು ಬರಗಾಲದ ವೀಕ್ಷಣೆಗೆ ಹೋಗುತ್ತಾರೆ, ನಾನು ಮಾನ್ಯ ಮುಖ್ಯ ಮಂತ್ರಿಯವರನ್ನು ಕೇಳುತ್ತೇನೆ. ನೀವು ನಾಲ್ಕು ಜನರು ಮಂತ್ರಿಗಳು ಹೋಗಿದ್ದಿರಲ್ಲಾ, ಅಲ್ಲಿ ಎಲ್ಲಿ ಅವ್ಯವಹಾರಗಳು ಕಂಡು ಬಂದವು? ಹಾಗೆ ಅವ್ಯವಹಾರ ಕಂಡು ಬಂದಮೇಲೆ, ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಮತ್ತೆ ಎಷ್ಟು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೀರಿ? ಈ ಲೆಕ್ಕವನ್ನು ತಾವು ದಯವಿಟ್ಟು ಕೊಡಿ, ಇಲ್ಲವೆಂದರೆ ಅವ್ಯವಹಾರ ಆಗಿಲ್ಲವೆಂದು ಹೇಳುತ್ತಿರೋ, ಅದರ ಬಗ್ಗೆಯೂ ಹೇಳಿ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರೇ, ಒಂದು ನಿಮಿಷ, ಇಲ್ಲಿ ಸರ್ಕಾರವೇ ಚರ್ಚೆಯ ಬಗ್ಗೆ ಮೋಷನ್ ಅನ್ನು ಮೂವ್ ಮಾಡಿದ ಆಧಾರದ ಮೇಲೆ ಅದನ್ನು ನಾವು ಒಪ್ಪಿ, ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ, ಬಹಳ ಮುಖ್ಯವಾದಂತಹ ವಿಚಾರಗಳನ್ನು ಇಲ್ಲಿ ಇಡುತ್ತಿದ್ದಾರೆ. ಸರ್ಕಾರವೇ ಏನು ಮಾಡಿದೆ, ಎನ್ನುವಂತಹ ವಿಚಾರವನ್ನು ಇಡುತ್ತಿದ್ದಾರೆ, ಹೀಗೆ ಇರುವಂತಹ ಸಂದರ್ಭದಲ್ಲಿ ಜವಾಬ್ದಾರಿ ಇರುವಂತಹ ರೆವಿನ್ಯೂ ಮಂತ್ರಿಯವರು ಸದನದಲ್ಲಿ ಇಲ್ಲ, ಇದನ್ನು ಯಾರು ನೋಟ್ ಮಾಡಿಕೊಳ್ಳುತ್ತಾರೆ? ಇದಕ್ಕೆ ಸಂಬಂಧಪಟ್ಟವರು ಉತ್ತರ ಹೇಳಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ನಾವು ಕೇಳುತ್ತಿದ್ದೇವೆ, ಇಲ್ಲಿ ಯಾರು ಬಂದು ಉತ್ತರ ಕೊಡಬೇಕು, ಅವರು ಕೊನೆಗೆ ಕೊಡುತ್ತಾರೆ. ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆಂದು, ನಾವು ಗಂಭೀರವಾಗಿ ಕೇಳುತ್ತಿದ್ದೇವೆ. ಅವರು ಸಾರಸಗಟಾಗಿ sweeping remarks ಮಾಡುತ್ತಿದ್ದಾರೆ, ಅವರು ಕೋಟಿಗಟ್ಟಲೆ ಹೋಯಿತು, ಲೂಟಿಯಾಯಿತು.

ಎಲ್ಲಾ ತಾಲ್ಲೂಕುಗಳಲ್ಲೂ ಹಾಗಾಯಿತೆಂದು specific instances ಕೊಟ್ಟರೆ, ಇದು ತಪ್ಪಾಗಿದೆ, ಇದನ್ನು ಎನ್‌ಕ್ವಾಯರಿ ಮಾಡಿ, ಎಂದು ಹೇಳಿದರೆ, ಅದಕ್ಕೆ ಏನಾದರೂ ದುರಸ್ಥಿ ಮಾಡಬಹುದು, ತಪ್ಪು ಇದ್ದಲ್ಲಿ ಇದನ್ನು ಎನ್‌ಕ್ವಾಯರಿ ಮಾಡೋಣ ಎಂದು ಹೇಳಬಹುದು, ಆ್ಯಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಬಹುದು, ಆದರೆ ಇವರು ಸಾರಸಗಟಾಗಿ sweeping remarks ಮಾಡಿದರೆ, ಇದಕ್ಕೆ ನಾವು ಏನು ಹೇಳೋಣ.

ಶ್ರೀ ಎ. ರಾಮದಾಸ್ : ಅದನ್ನು ಹೇಳುತ್ತೇವೆ, ಸರ್ಕಾರ ಎಷ್ಟರಮಟ್ಟಿಗೆ ಸಿರಿಯಸ್ಸಾಗಿ ತೆಗೆದುಕೊಂಡಿದೆ. ಬರದ ಬಗ್ಗೆಯಂತೂ ಸಿರಿಯಸ್ಸಾಗಿ ತೆಗೆದುಕೊಂಡಿಲ್ಲ. ಇಲ್ಲಿ ಚರ್ಚೆಯನ್ನಾದರೂ ಸಿರಿಯಸ್ಸಾಗಿ ತೆಗೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಸರ್ಕಾರಗಳು ಅಧಿಕಾರಿಗಳು ಕೊಟ್ಟಂತಹ ಸ್ಟ್ಯಾಟಿಸ್ಟಿಕ್ಸ್ ಮೇಲೆ ಡಿಪೆಂಡ್ ಇರುತ್ತದೆ, ಕೇಂದ್ರ ಸರ್ಕಾರ ಏನು ಕೆಳಗೆ ಹೋಗುತ್ತಾರಾ? ಇಲ್ಲಿ ಆಫೀಸರ್ಸ್ ಮಾಹಿತಿಗಳನ್ನು ನಮಗೆ ಕೊಡುತ್ತಾರೆ, ನಾವು ಅದನ್ನು ಕೇಂದ್ರ ಸರ್ಕಾರಕ್ಕೆ ಕೊಡುತ್ತೇವೆ. ಈ ರೀತಿಯಾಗಿ ಎಲ್ಲಾ ರಾಜ್ಯಗಳಲ್ಲೂ ನಡೆಯುವಂಥಾದ್ದು, ಮತ್ತೆ ಎಲ್ಲಾ ಆಡಳಿತದಲ್ಲೂ ನಡೆಯುವಂಥಾದ್ದು. ಇಲ್ಲಿ ನಾವು ನಾವೇ ಇವತ್ತಿನ ದಿವಸ ಈ ರೀತಿಯಾಗಿ ಬರಗಾಲ ಕಾಮಗಾರಿಯ ಬಗ್ಗೆ ಮಾತನಾಡಿಕೊಂಡು ಹೋದರೆ, ನಾಳೆ ಏನು ಮೆಸೇಜ್ ಹೋಗುತ್ತದೆಂದರೆ, ನಿಜವಾಗಿಯೂ ಇಲ್ಲಿ ಎಲ್ಲವೂ ಕೂಡ ಅಸ್ತವ್ಯಸ್ಥವಾಗಿದೆ, ಯಾರೂ ಇದರ ಬಗ್ಗೆ ನೋಡುತ್ತಿಲ್ಲ ಎಂದು ಎಲ್ಲಾ ಎಂ.ಎಲ್.ಎ.ಗಳು ಟಾಸ್ಕ್‌ಫೋರ್ಸ್ ಕಮಿಟಿ ಚೇರ್ಮನ್ಸ್ ಎಲ್ಲಾ ಶಾಸಕರೇ, ಇದ್ದಾರೆ. ಅವರು ಏನು ಕೆಲಸ ಹೇಳುತ್ತಾರೋ, ಅವರು ಎಲ್ಲಿ ಅಲಾಟ್ ಮಾಡುತ್ತಾರೆ, ಅದನ್ನೇ ಪ್ರಾರಂಭ ಮಾಡಿದ್ದು, ಅಂದರೆ ನಮ್ಮ ಶಾಸಕರ ಮೇಲೆ, ನಮಗೆ ವಿಶ್ವಾಸವಿಲ್ಲ. ನಮ್ಮ ಶಾಸಕರೇ, ಎಲ್ಲರೂ ಲೂಟಿ ಮಾಡುತ್ತಾರೆಂದು ಆದರೆ, ಈ ಭಾವನೆ ಬರತಕ್ಕಂಥ ರೀತಿಯಲ್ಲಿ ನಾವು ಮಾತನಾಡಿದರೆ, ನಾಳೆ ದಿವಸ ಹೊರಗಡೆ ಏನು ಮೆಸೇಜ್ ಹೋಗುತ್ತದೆ? ಇನ್ನು ಎರಡನೆಯದಾಗಿ ಎಲ್ಲಿ ತಪ್ಪು ಇದೆ, ಅದನ್ನು ಸರಿಪಡಿಸೋಣ, ಅಥವಾ ತಾವು ಇಂಥಾದ್ದು ತಪ್ಪಾಗಿದೆ, ನೀವು ಏಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳಿದರೆ, ಅದರ ಬಗ್ಗೆ ವಿಚಾರಿಸೋಣ, ಆದರೆ sweeping remarks ಮಾಡಿದರೆ ಹೇಗೆ? ತಾವು ಜವಾಬ್ದಾರಿ ಸ್ಥಾನದಲ್ಲಿ ಇದ್ದೀರಿ, ಈ ರೀತಿ sweeping remarks ಮಾಡಿದರೆ ನಮ್ಮ ರಾಜ್ಯದ ಹಿತಕ್ಕೆ, ಮತ್ತೆ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಾಗಬಾರದೆಂಬ ದೃಷ್ಟಿಯಿಂದ ನಾನು ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಯಾವುದೇ ರೀತಿಯಿಂದ ನಮ್ಮ ರಾಜಕೀಯ ಇದರೊಳಗೆ ಬರದ ರೀತಿಯಲ್ಲಿ, ಇಲ್ಲಿ ರಾಜ್ಯದ ಅಭಿವೃದ್ಧಿ ಕೆಲಸಗಳು ಹೇಗೆ ಆಗಬೇಕು, ತಪ್ಪನ್ನು ಹೇಗೆ ಸುಧಾರಣೆ ಮಾಡಿಕೊಳ್ಳಬೇಕು, ಅಥವಾ ನಾವು ಏನಾದರೂ ಲೋಪದೋಷಗಳನ್ನು ಮಾಡಿದ್ದರೆ, ಅದನ್ನು ಹೇಗೆ ಸರಿಮಾಡಬೇಕು. ಈ ರೀತಿಯಲ್ಲಿ ತಾವು ಹೇಳಿದರೆ, ನಮಗೂ ಅನುಕೂಲವಾಗುತ್ತದೆ, ಮತ್ತೆ ಸಾರ್ವಜನಿಕರಿಗೂ ಸಹಾಯ ಮಾಡಿದ ಹಾಗೆ ಆಗುತ್ತದೆ, ಮತ್ತೆ ಈ ಕರ್ನಾಟಕ ರಾಜ್ಯದಲ್ಲಿ ಬರಗಾಲ ತಾವು ಹೇಳಿದ ಹಾಗೆ ಕಳೆದ ಮೂರು ವರ್ಷಗಳಲ್ಲಿ ಜನರು ಏನು ತೊಂದರೆಗೆ ಒಳಪಟ್ಟಿದ್ದಾರೋ, ಅದಕ್ಕೆ ನಾವು ಇಬ್ಬರೂ ಸೇರಿ ಸ್ಪಂದಿಸಿದ ಹಾಗೆ ಆಗುತ್ತದೆ, ಅದಕ್ಕೆ ತಾವು ದಯವಿಟ್ಟು ಇದರ ಬಗ್ಗೆ ಬೆಳಕು ಚೆಲ್ಲಬೇಕೆಂದು ಹೇಳುತ್ತೇನೆ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೇ, ಸದನದ ಹಿತದೃಷ್ಟಿಯಿಂದ ರೆವಿನ್ಯೂ ಮಂತ್ರಿಯವರನ್ನು ಕರೆಸಿ, ಜವಾಬ್ದಾರಿಯುತವಾದಂತಹ ಸಮಸ್ಯೆಗಳು ಇವೆ, ಆದುದರಿಂದ ಅವರನ್ನು ಕರೆಸಿ, ಈ ಚರ್ಚೆಗೆ ಒಂದು ಗೌರವವನ್ನು ಕೊಡಿ; ಇದಕ್ಕೆ ಗೌರವ ಬರುವಂತಹ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ಮಾನ್ಯ ಉಪಾಧ್ಯಕ್ಷರಲ್ಲಿ ನನ್ನದು ಒಂದು ಮನವಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ಕೌನ್ಸಿಲ್‌ನಲ್ಲೂ ಇದೇ ವಿಷಯವೇ ಚರ್ಚೆಯಾಗುತ್ತಿದೆ. ನಾನು ಬರೆದುಕೊಂಡು ಅವರಿಗೆ ಹೇಳುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ ನಾವು ಕೌನ್ಸಿಲಗಿಂತಲೂ ನಮ್ಮ ಈ ಸದನಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದೀರಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಮೊದಲು ಚರ್ಚೆಯನ್ನು ಪ್ರಾರಂಭ ಮಾಡಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಯಾವಾಗಲೂ ಅಲ್ಲಿ ಸಿಗುವಂತಹ ಪ್ರಾಮುಖ್ಯತೆ ಸಿಗುತ್ತಿಲ್ಲ, ಇದು ಪೀಪಲ್ಸ್ ಹೌಸ್, ಇದನ್ನು ತಾವು ದಯವಿಟ್ಟು ತಿಳಿದುಕೊಳ್ಳಬೇಕು, ತಾವು ವಿರೋಧಪಕ್ಷದಲ್ಲಿ ಇದ್ದಾಗ, ನಾವು ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವಾಗ, ಎಷ್ಟು ಸಲ ಇಲ್ಲವೆಂದು ಹೇಳುತ್ತಿದ್ದೀರಿ, ಈಗ ತಾವು "ಸಬ್ ಕಮಿಟಿ"ಯ ಚೇರ್ಮನ್ ಆಗಿರಬಹುದು, ಆದರೆ you are not the administrative Minister. Administrative Ministers are ಶ್ರೀ ನಾಗಪ್ಪನವರು ಇರಬಹುದು, ಅಥವಾ ಮಾನ್ಯ ಶ್ರೀ ಕಂಠಯ್ಯನವರು ಇರಬಹುದು. ಆ ಕಡತಗಳು ಅವರಿಗೆ ಬರಬಹುದು, ಇಲ್ಲಿ ಅವರು ಒಬ್ಬರೂ ಇಲ್ಲದೇ ಹೋದರೆ, ಏನಾಗುತ್ತದೆ ಅಥವಾ ಮಾನ್ಯ ಮುಖ್ಯಮಂತ್ರಿಯವರಾದರೂ ಇರಬೇಕಾಗುತ್ತದೆ. ಇಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಇಲ್ಲಿ ಸಂಬಂಧಪಟ್ಟಂತಹ ಮಂತ್ರಿಗಳೇ, ಇಲ್ಲದಿದ್ದರೆ ಏನಾಗುತ್ತದೆ? ಇದಕ್ಕೆ ಏನು ಪ್ರಾಮುಖ್ಯತೆ ಸಿಗುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಚರ್ಚೆ ಪ್ರಾರಂಭವಾದ ಮೇಲೆ ಅವರು ಇಲ್ಲಿ ಇರಬೇಕಲ್ಲಾ.

ಶ್ರೀ ಬಿ. ರಮಾನಾಥ ರೈ : ಇವರು ನಿನ್ನೆಯೇ ಚರ್ಚೆ ಪ್ರಾರಂಭ ಮಾಡಬೇಕಾಗಿತ್ತು.

ಶ್ರೀ ಹೆಚ್.ಎಂ. ರೇವಣ್ಣ : ಮೇಲ್ಮನೆಯಲ್ಲಿ ನಿನ್ನೆಯಿಂದಲೇ ಚರ್ಚೆ ಪ್ರಾರಂಭವಾಗಿದೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಒಬ್ಬ ಮಂತ್ರಿಯವರು ಹೇಳಿದ ಹಾಗೆ ಸದನ ನಡೆಯುವುದಕ್ಕಾಗುತ್ತದೆಯೇ? ನಿಮಗೆ ಕನ್ವೀನಿಯೆಂಟ್ ಇದ್ದ ಹಾಗೆ ನಡೆಯುವುದಕ್ಕೆ ಆಗುತ್ತದೆಯೇ? ಸದನದ ಅನುಕೂಲತೆಗೆ ತಕ್ಕಂತೆ ನಡೆಯಬೇಕಾಗುತ್ತದೆ. ನಿನ್ನೆಯ ಚರ್ಚೆ ನಡೆಯಬೇಕಾಗಿತ್ತು, ಅಂದರೆ ಏನು? ಮಾನ್ಯ ರಮಾನಾಥ್ ರೈರವರು ಹಗುರವಾಗಿ ಮಾತನಾಡುತ್ತಿದ್ದಾರೆ, ಇದು ಸರಿಯಲ್ಲ, ಇದು ಪ್ರಾಮುಖ್ಯವಾದಂತಹ ವಿಚಾರವಾಗಿದೆ, ನಿನ್ನೆಯೇ ನಡೆಯಬೇಕಾಗಿತ್ತು, ಇವತ್ತು ಬೇಡಿ, ಎಂದು ಹೇಳುವುದಕ್ಕಾಗುತ್ತದೆಯೇ, ಇದು ಪ್ರಾಮುಖ್ಯವಾದಂತಹ ವಿಚಾರ.

ಶ್ರೀ ಬಿ. ರಮಾನಾಥ ರೈ : ಮೇಲ್ಮನೆಯಲ್ಲಿ ಈ ವಿಷಯವನ್ನು ನಿನ್ನೆಯೇ ಪ್ರಾರಂಭ ಮಾಡಿದ್ದಾರೆ, ಇವತ್ತು ಇಲ್ಲಿ ಪ್ರಾರಂಭ ಮಾಡಿದ್ದಾರೆ. ಈ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದಮೇಲೆ ಅವರು ಈ ಸದನಕ್ಕೆ ಬರುತ್ತಾರೆ.

ಶ್ರೀ ಬಿ. ಸೋಮಶೇಖರ್ : ನಾವು ಅಲ್ಲಿಯವರೆಗೂ ಇಲ್ಲಿ ನಿದ್ರೆ ಮಾಡುವುದಕ್ಕೆ ಆಗುವುದಿಲ್ಲ. ನಾವು ಇಲ್ಲಿ ಚರ್ಚೆ ಮಾಡಬೇಕಾಗುತ್ತದೆ. ಆದುದರಿಂದ ಮಾನ್ಯ ಉಪಾಧ್ಯಕ್ಷರೇ, ಯಾರಾದರೂ ಮಂತ್ರಿಯವರನ್ನು ಕರೆಯಿಸಿ.

ಉಪಾಧ್ಯಕ್ಷರು : ಚರ್ಚೆ ಮುಂದುವರೆಯಲಿ ಮಂತ್ರಿಯವರನ್ನು ಕರೆಸೋಣ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಯಾವಾಗ ಚರ್ಚೆ ಪ್ರಾರಂಭವಾಗುತ್ತದೆಂಬ ಸ್ಪಷ್ಟತೆ ಇರಲಿಲ್ಲ. ಆದುದರಿಂದ ಈ ರೀತಿಯಾಯಿತು. ಅವರು ಈಗ ಬರುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಇದನ್ನು ನಾವು ಈಗ ಅಲ್ಲ, ಈ ವಿಚಾರವಾಗಿ ಹಲವಾರು ಸಂದರ್ಭಗಳಲ್ಲಿ ಹೇಳಿದ್ದೇವೆ, ಈ ಸದನದ ಬಗ್ಗೆ ಸರ್ಕಾರಕ್ಕೆ ಗೌರವವಿಲ್ಲ, ಈ ಸದನಕ್ಕೆ ಅಂಜುವುದಿಲ್ಲ, ಎಲ್ಲವನ್ನೂ ಮೇಲ್ಮನೆಯಲ್ಲಿ ಪಾಸ್ ಮಾಡಿಕೊಂಡು ಇಲ್ಲಿಗೆ ಬರುತ್ತಾರೆ. ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವಂಥಾದ್ದು, ಮಾನ್ಯ ಉಪಾಧ್ಯಕ್ಷರೇ, ಇದನ್ನು ತಾವು ಗಂಭೀರವಾಗಿ ಪರಿಗಣಿಸಬೇಕು. ಈ ಸದನದ ಬಗ್ಗೆ ಸರ್ಕಾರಕ್ಕೆ ಗೌರವವಿಲ್ಲ. ಅಂಜಿಕೆ ಇಲ್ಲ. ಏಕೆಂದರೆ ಇಲ್ಲಿ ಬಹಳ ಮೆಜಾರಿಟಿ ಇದೆಯೆಂದು, ಇಲ್ಲಿ ಹೇಗೋ ನಡೆಸಿಕೊಂಡು ಹೋಗುತ್ತೇವೆಂಬ ಲೆಕ್ಕದಲ್ಲಿ ಇದ್ದೀರಿ, ಇದು ಮೊದಲಿನಿಂದಲೂ ಪ್ರತಿಯೊಂದು ಹಂತದಲ್ಲೂ ನಾವು ಇದನ್ನು ನೋಡುತ್ತಿದ್ದೇವೆ, ಇದರ ಬಗ್ಗೆ ತಾವು ಅಂಕಿಸಂಖ್ಯೆಯನ್ನು ಕೊಡಿ ಎಂದರೆ, ಬೇಕಾದರೆ ಕೊಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಏಕೆಂದರೆ ಇಲ್ಲಿ ಎರಡು ಮನೆಗಳು ಮುಖ್ಯವಾದದ್ದು, ಏಕೆಂದರೆ ನಾವು ನೀವು ಇಬ್ಬರೂ ಕೂಡಿ ಒಪ್ಪಿ, ಮೇಲ್ಮನೆಯನ್ನು ಇಟ್ಟಿರುವಂಥಾದ್ದು, ಆದುದರಿಂದ ಎರಡು ಮನೆಗಳೂ ಅಷ್ಟೇ ಮಹತ್ವವಾದುದಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಮೇಲ್ಮನೆಗೆ ಕೊಡುವಂತಹ ಮಹತ್ವವನ್ನು ಈ ಸದನಕ್ಕೆ ಕೊಡುತ್ತಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಲ್ಲಿ ನೀವು ಧರಣಿ ಮಾಡಿದಿರಿ, ಅದರಿಂದ ಮುಂದೆ ಹೋಗಿ ಈ ರೀತಿಯಾಯಿತು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯಲ್ಲಿ ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಯವರು ಇರಬೇಕಾಗುತ್ತದೆ, ಇಲ್ಲದಿದ್ದರೆ ನಾವು ಮಾತನಾಡುವುದು ಬೇಕಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬರುತ್ತಾರೆ, ಈಗ ಚರ್ಚೆಯನ್ನು ಕಂಟಿನ್ಯೂ ಮಾಡಿ, ಕರೆಸೋಣ.

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಈ ವಿಚಾರವಾಗಿ ನಿನ್ನೆಯಿಂದ ಧರಣಿ ನಡೆದು, ಇವತ್ತು ಈ ವಿಷಯ ಬಹಳ ಬಿಸಿ ವಾತಾವರಣದಲ್ಲಿ ಈ ಚರ್ಚೆ ಪ್ರಾರಂಭವಾಗುತ್ತಿದೆ, ಈಗ ಪ್ರಾರಂಭವಾಗುವಾಗಲೂ ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಗೌರವವಿಲ್ಲವೆಂದರೆ.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಸೋಮಶೇಖರ್‌ರವರೇ, ತಮಗೂ ಗೊತ್ತಿದೆ, ನಮ್ಮ ರೆವಿನ್ಯೂ ಮಿನಿಸ್ಟರ್‌ರವರು ಸಭೆಗೆ ಬಂದು ಎಷ್ಟು ಗೌರವವಾಗಿ ಕುಳಿತುಕೊಳ್ಳುತ್ತಾರೆ, ಅವು ಸದನದಲ್ಲಿ ಕೊನೆಯವರೆಗೂ ಇರುತ್ತಾರೆ,

ಶ್ರೀ ಬಿ. ಸೋಮಶೇಖರ್ : ಅವರು ಮಂತ್ರಿಗಳಾಗಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಅವರು ಸಭೆಯಲ್ಲಿ ಇರಲೇ ಬೇಕಾಗುತ್ತದೆ. ಕೊನೆ ಪಕ್ಷ ಮಾನ್ಯ ನಾಗಪ್ಪನವರನ್ನಾದರೂ ಕರೆಯಿಸಿ,

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಆಗಲೇ ಒಂದು ಇನ್ಸಿಡೆಂಟ್ ಆಗಿದ್ದು ಗೊತ್ತಿರಬಹುದು, ಮಾನ್ಯ ಸಿಂಧ್ಯರವರು ತೆಂಗಿನಮರದ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದರು. ಅದು ಪರಿಹಾರ ಕೊಡುವ ವಿಚಾರವಾಗಿ, ಆಗ ಮಾನ್ಯ ಮುಖ್ಯಮಂತ್ರಿಯವರು ಸೌಜನ್ಯಕ್ಕಾದರೂ ಸಭೆಯಲ್ಲಿ ಕುಳಿತುಕೊಳ್ಳಬಹುದಾಗಿತ್ತು, ಆದರೆ ಅವರು ಪರ್ಟಿಕ್ಯುಲರ್ ಆಗಿ ನೋಡಿ ಎದ್ದು ಹೋದರೆಂದು ನನಗನ್ನಿಸುತ್ತದೆ. ನಾನು ಈ ಚಾರ್ಜ ಮಾತ್ರ ಮಾಡುತ್ತೇನೆ. ತಾವು ರೆವಿನ್ಯೂ ಮಿನಿಸ್ಟರ್‌ರವರು ಸಭೆಯಲ್ಲಿ ಬಹಳ ಗಂಭೀರವಾಗಿ ಕುಳಿತುಕೊಳ್ಳುತ್ತಾರೆಂದು ಹೇಳಿದ್ದೀರಿ, ಅವರನ್ನು ನೀವೇ ಗಂಭೀರವಾಗಿ ಕರೆದುಕೊಂಡು ಬರಪೀಡಿತ ಪ್ರದೇಶವನ್ನು ನೋಡಲು ಕರೆದುಕೊಂಡು ಬಂದಿದ್ದೀರೆಂದು ನಾನು ಗಂಭೀರವಾಗಿ ಆರೋಪ ಮಾಡುತ್ತೇನೆ. ಅವರು ಬರ ಪರಿಸ್ಥಿತಿಯನ್ನು ನೋಡುವುದಕ್ಕೆ ಅವರು ಬರುತ್ತಿರಲಿಲ್ಲ. ನೀವೇ ಜಬರ್ದಸ್ತಿ ಮಾಡಿ ಅವರನ್ನು ಹೆಲಿಕ್ಯಾಪ್ಟರ್‌ನಲ್ಲಿ ಕರೆದುಕೊಂಡು ಬಂದಿದ್ದೀರೆನೋ, ಎಂದು ನನಗನ್ನಿಸುತ್ತಿದೆ. ನಾನು ಇಲ್ಲಿ ಎಷ್ಟು ಸಿರೀಯಸ್ ಆಗಿ ಹೇಳುತ್ತಿದ್ದೇನೆಂದರೆ, ಪರಿಹಾರ ಕೊಡುವಂತಹ ವಿಚಾರದಲ್ಲಿ ನಿರ್ಣಯ ಕೈಗೊಳ್ಳಬೇಕಾದಂತಹದ್ದು ಮಾನ್ಯ ಮುಖ್ಯಮಂತ್ರಿಯವರು, ಅವರು ಈ ಸಭೆಯಲ್ಲಿ ಇದ್ದಿದ್ದರೆ, ಈ ಸಭೆಗೂ, ಮತ್ತೆ ಈ ಬರಗಾಲ ವಿಚಾರಕ್ಕೂ ಒಂದು ಗಾಂಭೀರ್ಯತೆ ಬರುತ್ತಿತ್ತು, ಇದು ಅಷ್ಟೇ ಅಲ್ಲ, ಮಾನ್ಯ ಶಿವಣ್ಣನವರು ಒಂದು ವಿಷಯವನ್ನು ಪ್ರಸ್ತಾಪ ಮಾಡಿದರು. ಕೇವಲ ತೆಂಗಿನ ಮರಗಳು ಮಾತ್ರ ಒಣಗಿಲ್ಲ, ಇಡೀ ರಾಜ್ಯದಲ್ಲಿ ಬಹಳಷ್ಟು ತೋಟಗಾರಿಕೆ ಬೆಳೆಗಳು ಸಂಪೂರ್ಣವಾಗಿ ಒಣಗಿ ಹೋಗಿವೆ. ಅದರಲ್ಲಿ ದ್ರಾಕ್ಷಿ, ದಾಳಿಂಬೆ, ನಿಂಬೆ, ಇವುಗಳ ಬಗ್ಗೆ ಹೇಳಿದರು. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು, ಇದನ್ನು ಕೇಳಿದ್ದರೆ, ನಮಗೆ ಸಂತೋಷವಾಗುತ್ತಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದನ್ನು ಮಾನ್ಯ ಮುಖ್ಯಮಂತ್ರಿಯವರು ಕೇಳುತ್ತಾರೆ, ಮಾನ್ಯ ರೆವಿನ್ಯೂ ಮಿನಿಸ್ಟರ್‌ರವರು ಕೇಳುತ್ತಾರೆ, ಮತ್ತೆ ಈ ವಿಷಯವನ್ನು ನೋಡಿಕೊಳ್ಳುತ್ತಿರುವಂತಹ ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರು, ಇವರೆಲ್ಲರಿಂದಲೂ ಕೇಳಿಸುತ್ತೇವೆ. ಸಭೆಯಲ್ಲಿ ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಪ್ರತಿಯೊಂದು ಪಾಯಿಂಟ್‌ಗೂ ನಿಮಗೆ ಉತ್ತರ ಕೊಡುತ್ತೇವೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳೇ ಸದನದಲ್ಲಿ ನ್ಯಾಯವಾಗಿ ಇರಬೇಕಾಗುತ್ತದೆ. ಹಾಗಿದ್ದಾಗ ಸಂಬಂಧಪಟ್ಟ ಮಂತ್ರಿಗಳು ಇಲ್ಲವೆಂದರೆ ಬಹಳ ಲಘುವಾಗಿ ತೆಗೆದುಕೊಂಡಿದ್ದೀರಿ, ನೀವೇನಾದರೂ ಇಲ್ಲಿ ಇದ್ದಿದ್ದರೆ ಸುಮ್ಮನೆ ಇರುತ್ತಿದ್ದೀರಾ?

ಉಪಾಧ್ಯಕ್ಷರು : ಇಬ್ಬರಲ್ಲಿ ಒಬ್ಬರನ್ನಾದರೂ ಸದನಕ್ಕೆ ಕರೆಯಿಸಿ.

ಶ್ರೀ ಆರಗ ಜ್ಞಾನೇಂದ್ರ : ಬೆಳೆ ಒಣಗಿರುವುದಲ್ಲ. ಸರ್ಕಾರದ ಮನಸ್ಸೂ ಕೂಡ ಒಣಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ವಿರೋಧಪಕ್ಷದ ನಾಯಕರು ಮಾತನಾಡುವಾಗ ಮಾಜಿ ಮಾನ್ಯ ಮುಖ್ಯಮಂತ್ರಿಗಳಾದ ದಿ: ಜೆ.ಹೆಚ್. ಪಟೇಲರು ಕಡ್ಡಾಯವಾಗಿ ಈ ಸದನದಲ್ಲಿರುತ್ತಿದ್ದರು, ತಾವು ಹಿರಿಯರಿದ್ದೀರಿ, ದಯವಿಟ್ಟು ಅದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) : ಮಾನ್ಯ ಪಾಟೀಲರೆ, ಬಹಳ ಹಿಂದಿನದು ನೆನಪಿದೆ ಮರೆತಿಲ್ಲ, ಯಾರ್ಯಾರು ಹೇಗೆ ನಡೆದುಕೊಂಡಿದ್ದಾರೆಂಬುದು ಗೊತ್ತಿದೆ. ಏನೇನು ಇಲ್ಲಿ ನಡವಳಿಕೆಯಾಗಿದೆ ಎಂಬುದೆಲ್ಲಾ ನೆನಪಿದೆ. ಏನೂ ಮರೆತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗಲಾದರೂ ಗೌರವದಿಂದ ನಡೆದುಕೊಳ್ಳಿರಿ.

ಶ್ರೀ ಎ. ರಾಮದಾಸ್ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಖರ್ಗೆಯವರು ಮಂತ್ರಿಯಾಗಿದ್ದವರು ನಮ್ಮಂತಹವರಿಗೆ ಒಂದು ಕಲಿಸುವಂತಹ ವಿಚಾರವಿರುತ್ತದೆ. ಅವರು ಇಲ್ಲಿ ಕುಳಿತಂಥ ಸಂದರ್ಭದಲ್ಲಿ, ನಾವೆಲ್ಲಾ ಅವರ ಜೊತೆ ಸೇರಿಕೊಂಡು ಎಲ್ಲಿದ್ದಾರೆ ಕರೆಯಿರಿ ಎಂದು ಗಲಾಟೆ ಮಾಡಿದ್ದೆವು, ಆದರೆ ಇವತ್ತು ನಮ್ಮ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳಿಲ್ಲ, ಕಂದಾಯ ಮಂತ್ರಿಗಳಿಲ್ಲವೆಂದರೆ ನನಗೇನು ಅರ್ಥವಾಗುತ್ತಿಲ್ಲ. I cannot understand.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಬರದ ಬಗ್ಗೆ ನಾವೆಲ್ಲಾ ಚರ್ಚೆ ಮಾಡುವುದನ್ನು ನಾವೆಲ್ಲರೂ ಸ್ವಾಗತ ಮಾಡಿದ್ದೇವೆ. ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ, ಅದು ತೀರ್ಮಾನವಾಗಿದೆ. ಆದರೆ ನಮ್ಮ ಗೃಹ ಮಂತ್ರಿಗಳು ಆಗಲೇ ಏನು ಕೆಲವೊಂದು ವಿಚಾರಗಳನ್ನು ಹೇಳಿದರು ಅದು ನೂರಕ್ಕೆ ನೂರರಷ್ಟು ಸತ್ಯವಾದ ಮಾತು. ಬರದ ಕಮಿಟಿಯಲ್ಲಿ ನಾವೇ ಅಧ್ಯಕ್ಷರಾಗಿದ್ದೇವೆ, ನಾವೇ ತೀರ್ಮಾನ ಮಾಡುತ್ತೇವೆ, ನಾವೇ ಅದು ಸರಿ ಇಲ್ಲ, ಇದು ಸರಿಯಿಲ್ಲವೆಂದು ಹೇಳುತ್ತೇವೆ, ಇಲ್ಲಿ ಬಂದು ಸರಿಯಿಲ್ಲವೆಂದರೆ, ಯಾರ ಬಗ್ಗೆ ದೂರು ಕೊಡಬೇಕು? ನಮ್ಮನ್ನು ನಾವೇ ದೂರಿಕೊಳ್ಳುವುದು ಸರಿಯೇ? ಇದು ಅಹಿತಕರವಾದ ಬೆಳವಣಿಗೆ, ಒಳ್ಳೆಯದಲ್ಲ .....

(ಗೊಂದಲ)

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಉಪಾಧ್ಯಕ್ಷರೇ, ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ಬರದೇ ಇದ್ದರೆ ತಾವು ಮಾತನಾಡಬೇಡಿ, ಸದನ ಮುಂದಕ್ಕೆ ಹಾಕಲಿ; ಇಷ್ಟೊಂದು ಲಘುವಾದ ಭಾವನೆ ಯಾವಾಗಲೂ ಬಂದಿರಲಿಲ್ಲ. ಮಾನ್ಯ ಖರ್ಗೆಯವರು ಹಿಂದೆ ಇಲ್ಲಿ ಕುಳಿತಿದ್ದರು. ನಾವೆಲ್ಲಾ ಇಲ್ಲೇ ಇದ್ದೆವು. ಮುಖ್ಯಮಂತ್ರಿಗಳು ಸದನದಲ್ಲಿ ಅವರ ಸ್ಥಾನದಲ್ಲಿರಲಿಲ್ಲವೆಂದರೆ ಮಾತನಾಡಲು ಮುಂದಾಗುತ್ತಿರಲಿಲ್ಲ. ವಿರೋಧಪಕ್ಷಕ್ಕೆ ಯಾವ ರೀತಿಯ ಗೌರವ ಮನ್ನಣೆ ಇದೆ ಎಂಬುದನ್ನು ಈ ರಾಜ್ಯದ ಜನತೆ ಗಮನಿಸಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹೇಳಿ ಕಳುಹಿಸಲಾಗಿದೆ. ಮಾನ್ಯ ಮುಖ್ಯಮಂತ್ರಿಗಳೂ ಬರುತ್ತಾರೆ, ಕಂದಾಯ ಮುಂತ್ರಿಗಳೂ ಬರುತ್ತಾರೆ. ವಿರೋಧಪಕ್ಷದ ನಾಯಕರು ಮಾತನಾಡುವುದನ್ನು ಮುಂದುವರೆಸಲಿ, ತಾವು ತಂಪು ಪ್ರದೇಶದಿಂದ ಬಂದಿದ್ದಿರಿ, ಏಕೆ ಇಷ್ಟೊಂದು ಸಿಟ್ಟು?

ಶ್ರೀ ಆರಗ ಜ್ಞಾನೇಂದ್ರ : ಆ ವಿಷಯವಲ್ಲ, ಇಲ್ಲಿ ಸದನದ ನಡವಳಿಕೆಯ ಪ್ರಶ್ನೆ ಇದೆ, ತಾವು ಈ ಸೀಟಿನಲ್ಲಿದ್ದಾಗ ಏನು ಮಾಡಿದಿರಿ ಹೇಳಿ?

ಶ್ರೀ ಕರಿಯಣ್ಣ : ಮಾನ್ಯ ಸದಸ್ಯರು ತೀರ್ಥಹಳ್ಳಿ ಕ್ಷೇತ್ರದಲ್ಲಿ ಬರ ಸಮಿತಿಯ ಅಧ್ಯಕ್ಷರಾಗಿದ್ದಾರೆ, ಅವರ ಕ್ಷೇತ್ರದಲ್ಲಿ ಏನಾದರೂ ಭ್ರಷ್ಟಾಚಾರವಾಗಿದೆಯೇ ಎಂಬುದನ್ನು ಕೇಳಿ. ಈಗ ಬರಗಾಲ ಕಾಮಗಾರಿಯ ಕ್ಯಾಬಿನೆಟ್ ಸಬ್ ಕಮಿಟಿಯ ಅಧ್ಯಕ್ಷರನ್ನಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಮಾಡಿದ್ದಾರೆ, ಬರಗಾಲ ಕಾಮಗಾರಿಯ ಬಗ್ಗೆ ಸಂಪೂರ್ಣವಾದ ವಿಚಾರ ತಿಳಿದುಕೊಳ್ಳಲು ರಾಜ್ಯದಲ್ಲೆಲ್ಲಾ ಪ್ರವಾಸ ಕೈಗೊಂಡಿದ್ದಾರೆ, ಅವರೇ ಸದನದಲ್ಲಿ ಇರಬೇಕಾದರೆ, ಮತ್ತೆ ಯಾರು ಬೇಕು ಸ್ವಾಮಿ? ಇವರು ಬರಿ ಸಣ್ಣ ಸಣ್ಣ ವಿಚಾರಕ್ಕೆ ಪ್ರತಿಷ್ಠೆ ಮಾಡುತ್ತಾ ಹೋಗುತ್ತಾರೆ ಇದೇನು ಸ್ವಾಮಿ?.....

ಶ್ರೀ ಆರಗ ಜ್ಞಾನೇಂದ್ರ : ಖರ್ಗೆ ಸಾಹೇಬರ ಬಗ್ಗೆ ಮಾನ್ಯ ಕರಿಯಣ್ಣನವರಿಗಿಂತ ಹೆಚ್ಚು ಗೌರವ ನಮಗೆ ಇದೆ. ಅದಲ್ಲ. ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡುವಾಗ ಸಂಬಂಧಿಸಿದ ಮಂತ್ರಿಗಳಾದರೂ ಇಲ್ಲದಿದ್ದರೆ ಹೇಗೆ? ಇದು ಸದನದ ನಡವಳಿಕೆಯ ಪ್ರಶ್ನೆ ಸ್ವಾಮಿ, ಬರದ ಬಗ್ಗೆ ಸರ್ಕಾರದ ಮುಖ್ಯಸ್ಥರಿಗೆ ಕಳಕಳಿ ಇಲ್ಲವೇ?

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೆ, ಇವತ್ತು ಈ ವಿಚಾರದ ಗಾಂಭೀರ್ಯತೆಯನ್ನು ಅರ್ಥ–ಮಾಡಿಕೊಂಡು, ನಮ್ಮ ಸಂಧಾನ ಏನು ನಡೆಯಿತು ಎಂದರೆ, ಸರ್ಕಾರ ಈ ಒಂದು ವಿಚಾರವನ್ನು ಬಹಳ ತೀಕ್ಷ್ಣವಾಗಿ ಪರಿಗಣಿಸಿದೆ ಎಂದು ನೀವೇ, ಸರ್ಕಾರವೇ, ಮೊಷನ್ ಮೂವ್ ಮಾಡಿದ್ದು. ಸರ್ಕಾರವೇ ಇಷ್ಟೊಂದು ಬೇಜವಾಬ್ದಾರಿಯಿಂದ ವರ್ತಿಸಿದರೆ, ಹೇಗೆ? ವಿರೋಧಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳು, ಕಂದಾಯ ಮಂತ್ರಿಗಳು ಇಲ್ಲದಿರುವುದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಲಾಗುವುದಿಲ್ಲ. ನಾವು ಇದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಸ್ವಾಮಿ, ಅವರನ್ನು ಕರೆಯಿಸಲೇ ಬೇಕು. ಅಥವಾ ಸಂಬಂಧಪಟ್ಟ ಮಂತ್ರಿಗಳಾದರೂ ಇರಲೇಬೇಕು. ವಿರೋಧಪಕ್ಷಕ್ಕೆ ಗೌರವವಿಲ್ಲ.

ಉಪಾಧ್ಯಕ್ಷರು : ನಾನು ಹೇಳಿ ಕಳುಹಿಸಿದ್ದೇನೆ, ಆ ಮನೆಯಿಂದ ಬರುವವರೆಗಾದರೂ ತಾಳ್ಮೆಯಿಂದ ಇರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಬೇಜವಾಬ್ದಾರಿಯಿಂದ ವರ್ತಿಸಿಲ್ಲ, ಬೇಜವಾಬ್ದಾರಿಯಾಗಿ ಮಾತನಾಡಿಯೂ ಇಲ್ಲ. ನಾವೆಲ್ಲರೂ ಸೇರಿ ಒಪ್ಪಂದದ ಮೇಲೆ ಮೊಷನ್ ಮೂವ್ ಮಾಡಿದ್ದು, ಇವತ್ತು ಈ ವಿಚಾರವನ್ನು ನಾವು ಲಘುವಾಗಿ ತೆಗೆದುಕೊಂಡಿಲ್ಲ ಅಥವಾ ಈ ಒಂದು ಸಮಸ್ಯೆಯನ್ನು ಹಗುರವಾಗಿ ನೋಡುತ್ತಿಲ್ಲ. ಗಂಭೀರವಾಗಿಯೇ ಪರಿಗಣಿಸಿದ್ದೇವೆ. ನಾವು ನೀವು ಸೇರಿ ಚರ್ಚೆ ಮಾಡಿ ಇದಕ್ಕೆ ಏನಾದರೂ ಉಪಾಯವನ್ನು ಕಂಡುಹಿಡಿಯಬೇಕು ಎನ್ನುವ ದೃಷ್ಟಿಯಿಂದಲೇ ನಾವು ಇದನ್ನು ಮಾಡಿದ್ದು. ಆದರೆ ಡೆಲಿಗೇಷನ್‌ನಲ್ಲಿ ಮುಖ್ಯಮಂತ್ರಿಗಳು ಇದ್ದರೂ ಅವರನ್ನು ಕರೆಯಿಸಿ, ರೆವಿನ್ಯೂ ಮಿನಿಸ್ಟರ್ ಕೌನ್ಸಿಲ್‌ನಲ್ಲಿದ್ದರೆ ಕರೆಯಿಸಿ ಎಂದರೆ ಹೇಗೆ? ನೋಡಿ ಮಾನ್ಯ ಕಂದಾಯ ಮಂತ್ರಿಗಳು ಸೆವೆಂಟಿ ಸಿಕ್ಸ್ ನಾಟ್ ಔಟ್ ಬಂದರು. ಮಾನ್ಯ ವಿರೋಧಪಕ್ಷದ ನಾಯಕರು ತಾವು ಮುಂದುವರೆಸಿ, ಮಾನ್ಯ ಮುಖ್ಯಮಂತ್ರಿಗಳು ಡೆಲಿಗೇಷನ್ ಜೊತೆ ಇದ್ದಾರೆ ಅವರೂ ಕೂಡ ಬರುತ್ತಾರೆ.

ಉಪಾಧ್ಯಕ್ಷರು : ಕಂದಾಯ ಮಂತ್ರಿಗಳು ದಯವಿಟ್ಟು ಈ ಸಭೆ ಮುಗಿಯುವವರೆಗೆ ಎಲ್ಲೂ ಹೋಗಬಾರದು. ಇಲ್ಲಿಯೇ ಇರಬೇಕು.

ಶ್ರೀ ಎ.ಎಸ್. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಾಕಷ್ಟು ಅಭಿಪ್ರಾಯಗಳನ್ನು ನಮ್ಮ ವಿರೋಧಪಕ್ಷದ ಮಿತ್ರರಿಂದ ಕೇಳಿದ್ದೀರಿ, ಸ್ವೀಕಾರ ಮಾಡಿದ್ದೀರಿ, ಈ ಕಡೆಯವರನ್ನೂ ಸ್ವಲ್ಪ ಕೇಳಿ ಸ್ವಾಮಿ? ಬರಗಾಲ ಅವರೊಬ್ಬರಿಗೆ ಬಂದಿದೆಯೇ? ಅನಿಷ್ಟ ಅದು ನಮಗೂ ಸುತ್ತಿಕೊಂಡಿದೆ, ಇಡೀ ಕರ್ನಾಟಕಕ್ಕೆ ಬರಗಾಲ ಸುತ್ತಿಕೊಂಡಿದೆ, ಏನು ಕೆಲವೇ ಜನಕ್ಕೆ ಸೀಮಿತವಾಗಿದೆ ಎನ್ನುವ ರೀತಿಯಲ್ಲಿ ಪ್ರಜೆಕ್ಟ್ ಮಾಡುತ್ತಿದ್ದಾರಲ್ಲಾ, ಹಾಗಾದರೆ ನಾವೆಲ್ಲಾ ಬರದ ಚರ್ಚೆಗೆ ವಿರೋಧವಿದ್ದೇವೆಯೆ? ಬರ ಸ್ವಾಭಾವಿಕವಾಗಿ ಬಂದಿರುವುದು ಇದಕ್ಕೆ ಸ್ವಾಭಾವಿಕವಾಗಿ ಕೆಲಸವಾಗಬೇಕು. ಇದು ಕಲರೈಸೆಷನ್ ಆಗಬಾರದು, ಇದನ್ನು ನಾನ್ ಪೊಲಿಟಿಕಲ್ ಆಗಿ ಡಿಸ್ಕಸ್ ಮಾಡಿದರೆ ಬಹಳಷ್ಟು ಒಳ್ಳೆಯದಾಗುತ್ತದೆ. ಕೇಂದ್ರದಿಂದಲೂ ಹಣ ಬರುತ್ತದೆ. ಅಲ್ಲಿಯೂ ಕೂಡ ನ್ಯಾಚುರಲ್ ಕೆಲಮಿಟಿ ಎಂದು ಒಂದು ದೊಡ್ಡ ಹೆಡ್ ಇದೆ, ಅದರಿಂದ ಹಣ ಬರಲು ಅವಕಾಶವಿದೆ. ಆ ರೀತಿಯಾಗಿ ಪರ್‌ಸ್ಪೆಕ್ಟೀವ್ ಆಗಿ ಫ್ಯಾಕ್ಚುಯಲ್ ಆಗಿ ಸ್ವಾಭಾವಿಕವಾಗಿ ಇದನ್ನು ಡಿಸ್ಕಸ್ ಮಾಡಿದರೆ, ಒಳ್ಳೆಯದು ಯಾರ ಬಗ್ಗೆಯೂ ಅದಾಯಿತು ಇದಾಯಿತು ಎಂದು ಮಾತನಾಡದೆ ಬರಬಾರದಂತೆ ಏನು ಮಾಡಬೇಕೆನ್ನುವ ಬಗ್ಗೆ ನಿರ್ಣಯ ಮಾಡಿ ಸರ್. ನದಿ ಜೋಡಣೆ ಬಗ್ಗೆ ಕೇಂದ್ರದವರು ಒಂದು ಮಹತ್ವವಾದಂಥ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಅದನ್ನು ಬಿಜೆಪಿಯವರೇ ಕೈಗೊಂಡಿರಲಿ, ಯಾವ ಪಕ್ಷದವರೇ ಕೈಗೊಂಡಿರಲಿ, ಅದು ಈ ದೇಶದಲ್ಲಿ ಬರವನ್ನು ಹೊರಗಟ್ಟಲಿಕ್ಕೆ ಒಂದು ಒಳ್ಳೆಯ ಕಾರ್ಯಕ್ರಮ. ನಾವು ಅದನ್ನು ಸ್ವಾಗತ ಮಾಡುತ್ತೇವೆ ಎಂದು ಹೇಳಿದ್ದೇವೆ. ಆ ಕೆಲಸ ಮೊದಲು ಆದರೆ, ಈಗ ನೀರಿಲ್ಲ, ಬೆಳೆ ಇಲ್ಲ ಎಂದು ಹೇಳುತ್ತಿರುವುದಕ್ಕೆ ಬಹಳಷ್ಟು ಉಪಕಾರವಾಗುತ್ತದೆ. ನಾನು ಬಿಜೆಪಿಯವರ ಪರವಾಗಿ ಹೊಗಳುತ್ತಿಲ್ಲ. It is a good work. we pat you on the back. ಆದರೆ ಕಳೆದ ಎರಡು ದಿವಸಗಳಿಂದ ಪಾಲಿಟಿಕ್ಸ್ ಮಾಡಿ ಇಲ್ಲಿ ಏನೂ ಕೆಲಸವಾಗಲಿಲ್ಲ. ಆದ್ದರಿಂದ, ದಯವಿಟ್ಟು ಬರದ ಕಾರ್ಯಕ್ರಮದ ಬಗ್ಗೆಯೇ ಮಾತನಾಡಿ ಎಂದು ಮಾನ್ಯ ಮಿತ್ರರಲ್ಲಿ ಮನವಿ ಮಾಡುತ್ತೇನೆ. ಈ ಮೂಲೆಯಲ್ಲಿ ಕುಳಿತಿರುವ ನಮಗೂ ಅವಕಾಶ ಮಾಡಿಕೊಡಿ ಎಂದು ತಮ್ಮಲ್ಲೂ ಮನವಿ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರುಗಳು ಮತ್ತು ಇನ್ನಿತರ ಸದಸ್ಯರು ಏನು ಕೆಲವೊಂದು ಭಾವನೆಗಳನ್ನು ವ್ಯಕ್ತಪಡಿಸಿದರು ಎಂದರೆ, ಈ ರೀತಿಯಾದಂಥ ಗಂಭೀರವಾದ ಚರ್ಚೆ ನಡೆಯುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇರಬೇಕು ಮತ್ತು ಸಂಬಂಧಪಟ್ಟ ಸಚಿವರೂ ಇರಬೇಕು ಎಂದು. ಹೇಳಿದರು. ಹೀಗೆ ಚರ್ಚೆ ಮಾಡುವಂಥ ಸಂದರ್ಭದಲ್ಲಿ ಕಂದಾಯ ಸಚಿವರು ಇರಲಿಲ್ಲ. ಅವರು ಈಗ ಬಂದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳೂ ಇರಬೇಕಾಗಿತ್ತು. ಅವರು ಮೊನ್ನೆ ಹೆಲಿಕ್ಯಾಪ್ಟರ್‌ನಲ್ಲಿ ಪ್ರವಾಸ ಮಾಡಿಕೊಂಡು ಬಂದರು. ಆಗಲೇ ಶಿವಾನಂದ ಪಾಟೀಲರು ಹೇಳಿದರು. ಬಹುಶಃ ಖರ್ಗೆಯವರು ಒತ್ತಾಯ ಮಾಡಿ ಶ್ರೀಕಂಠಯ್ಯನವರನ್ನು ಕರೆದುಕೊಂಡು ಹೋಗಿದ್ದರು ಎಂದು. ಅಂದರೆ, ಇಲ್ಲಿ ಏನಾಗಿದೆ ಎಂದರೆ ನಮ್ಮ ಸರ್ಕಾರದವರು ಇದನ್ನು ಬಹಳ ಕ್ಯಾಷುಯಲ್ ಆಗಿ ತೆಗೆದುಕೊಂಡಿದ್ದಾರೆ. ಮುಖ್ಯ ಮಂತ್ರಿಗಳೂ ಹಾಗೆಯೇ ತೆಗೆದುಕೊಂಡಿದ್ದಾರೆ. ಮಂತ್ರಿಗಳೂ ಹಾಗೆಯೇ ತೆಗೆದುಕೊಂಡಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಏನು ಕಾಮಗಾರಿಗಳು ನಡೆಯುತ್ತಿವೆ, ಏನು ಇಲ್ಲ ಎನ್ನುವ ಬಗ್ಗೆ ಸ್ಪಷ್ಟ ಅರಿವು ಇಲ್ಲ. ನಾನೂ ಸಹ ಪ್ರವಾಸ ಮಾಡಿ ಬಂದಿದ್ದೇನೆ. ಸ್ಪೆಸಿಫಿಕ್ ಆಗಿ ಹೇಳುತ್ತೇನೆ. ಯಾವ

ಊರಿನಲ್ಲಿ ಏನಾಗಿದೆ, ಯಾವ ಕೆರೆಯಲ್ಲಿ ಎಷ್ಟು ಹೂಳು ತೆಗೆದಿದ್ದೀರಿ, ಎಷ್ಟು ಜೆ ಸಿ ಬಿ ಯಂತ್ರಗಳನ್ನು ಹಚ್ಚಿದ್ದೀರಿ, ಎಷ್ಟು ಜನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ, ಎಷ್ಟು ಲೂಟಿ ಮಾಡಿದ್ದಾರೆ ಎಂದು ಸ್ಪೆಸಿಫಿಕ್‌ಆಗಿ ಕೆಲವು ಊರುಗಳ, ಗ್ರಾಮಗಳ ಹೆಸರುಗಳನ್ನು ಹೇಳುತ್ತೇನೆ. ಬೇಕಾದರೆ ನೀವು ಒಂದು ಸದನ ಸಮಿತಿ ಮಾಡಿ, ನಾನು ಕೆಲವೊಂದು ಊರುಗಳ ಹೆಸರುಗಳನ್ನು ಹೇಳುತ್ತೇನೆ, ಅಲ್ಲಿಗೆ ಹೋಗಿ ಕೆರೆಗಳನ್ನು ನೋಡಿಕೊಂಡು ಬನ್ನಿ, ನಿಮಗೇ ಗೊತ್ತಾಗುತ್ತದೆ. ಸದನ ಸಮಿತಿಯನ್ನು ಇವತ್ತೇ ಮಾಡಿ, ಅಲ್ಲಿಗೆ ಹೋಗಿ ನೋಡಿಕೊಂಡು ಬರೋಣ. ಎಲ್ಲೆಲ್ಲಿ ಏನಾಗಿದೆ, ಎಷ್ಟು ಲೂಟಿ ಮಾಡಿದ್ದಾರೆ ಎಂದು ನೋಡಿಕೊಂಡು ಬರಲಿ. ಊರೆಲ್ಲ ಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರಂತೆ. ಹಾಗೆ ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ, ಎಲ್ಲಾ ಮುಗಿದ ಮೇಲೆ ಕೋಟೆ ಬಾಗಿಲು ಹಾಕಿದ್ದಾರೆ.

ಶ್ರೀ ವೆಂಕಟರಮಣಪ್ಪ : ಕೊಳ್ಳೆ ಹೊಡೆದಿದ್ದಾರೆ, ಲೂಟಿ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ, ನಮ್ಮ ಕ್ಷೇತ್ರಗಳಿಗೆ ಅವರು ಬಂದು ನೋಡಲಿ.

ಶ್ರೀ ಜಗದೀಶ್ ಶೆಟ್ಟರ್ : ಎಲ್ಲಿ ಆಗಿದೆ ಎನ್ನುವುದನ್ನು ನಾವು ಹೇಳುತ್ತೇವೆ.

ಉಪಾಧ್ಯಕ್ಷರು : ಅವರು ಹೇಳುತ್ತಾರೆ ಬಿಡಿ.

ಶ್ರೀ ವೆಂಕಟರಮಣಪ್ಪ : ಅವ್ಯವಹಾರವಾಗಿದೆ ಎಂದು ಹೇಳುತ್ತಿದ್ದಾರೆ. ನಮ್ಮ ಕ್ಷೇತ್ರಗಳಿಗೆ ಅವರು ಬಂದು ನೋಡಿ ಏನು ಅವ್ಯವಹಾರವಾಗಿದೆ ಎಂದು ಹೇಳಲಿ. ಅದನ್ನು ಬಿಟ್ಟು ಸುಮ್ಮನೆ ಹಗಲೆಲ್ಲಾ ಅವ್ಯವಹಾರವಾಗಿದೆ, ಲೂಟಿಯಾಗಿದೆ ಎಂದರೆ ಹೇಗೆ?

ಉಪಾಧ್ಯಕ್ಷರು : ನಾನು ನಿಮ್ಮನ್ನು ಕರೆದಿಲ್ಲ. ನೀವು ಏನು ಮಾತನಾಡಿದರೂ ಅದು ಕಡತಕ್ಕೆ ಹೋಗುವುದಿಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಆರಗ ಜ್ಞಾನೇಂದ್ರ : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿ ಡಿಸ್ಟರ್ಬ್ ಮಾಡುವುದು ಸರಿಯಾದುದಲ್ಲ.

ಉಪಾಧ್ಯಕ್ಷರು : ಈಗ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ, ಈಗ ನೀವು ಮಾತನಾಡಬಾರದು. ನಿಮಗೆ ಅವಕಾಶ ಕೊಡುತ್ತೇನೆ, ಆಗ ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ನಾನು ಸ್ಪೆಸಿಫಿಕ್ ಆಗಿ ಹೇಳುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅವರು ಮಾತನಾಡಲಿ, ಆ ಮೇಲೆ ಉತ್ತರ ಕೊಡುವಾಗ ನಾವು ಹೇಳೋಣ.

ಶ್ರೀ ವೆಂಕಟರಮಣಪ್ಪ : ಹಗಲೆಲ್ಲಾ, ಲೂಟಿ ಮಾಡಿದ್ದಾರೆ ಎಂದು ಹೇಳುತ್ತಿದ್ದಾರೆ. ನಿಮ್ಮ ಕ್ಷೇತ್ರದಲ್ಲಿ ಆಗಿದೆಯೇ?

ಉಪಾಧ್ಯಕ್ಷರು : ನೀವು ಕುಳಿತುಕೊಳ್ಳಿ. ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಉಪಾಧ್ಯಕ್ಷರೇ, ಇವರ ಪರಿಸ್ಥಿತಿ ಹೇಗಾಗಿದೆ ಎಂದರೆ, ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡರಂತೆ." ಇವರ ಪರಿಸ್ಥಿತಿ ಹಾಗಾಗಿದೆ. ನಂತರ ಉತ್ತರ ಕೊಡುವಾಗ ನೀವು ಹೇಳಿ. ತಕ್ಷಣ ಒಂದು ಸದನ ಸಮಿತಿಯನ್ನು ಮಾಡಿ ಕಳುಹಿಸಿ. ಯಾವ ಊರಿನಲ್ಲಿ ಏನಾಗಿದೆ, ಯಾವ ಊರಿನ ಯೋಗ್ಯತೆಯೇನು ಎಲ್ಲವನ್ನೂ ಹೇಳುತ್ತೇನೆ. ಸ್ವಲ್ಪ ತಾಳ್ಮೆ ತೆಗೆದುಕೊಳ್ಳಿ. ಎಲ್ಲಿ ಏನು ಅನ್ಯಾಯವಾಗಿದೆ ಎಂದು ಹೇಳುತ್ತೇವೆ. ರೈತರ ಹೊಟ್ಟೆ

ಮೇಲೆ ಹೊಡೆಯುತ್ತಿದ್ದೀರಿ, ಬರಗಾಲ ಕಾಮಗಾರಿಯಿಲ್ಲ. ದನಕರುಗಳಿಗೆ ಮೇವಿಲ್ಲ, ಎಲ್ಲಾ ಕಡೆಯೂ ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಟ್ರಾಕ್ಟರ್‌ಗಳನ್ನು ಸೀಜ್ ಮಾಡುತ್ತಿದ್ದಾರೆ, ರೈತರ ಆಸ್ತಿಗಳನ್ನು ಜಪ್ತಿ ಮಾಡುತ್ತಿದ್ದಾರೆ. ಬೆಳೆ ವಿಮೆಯ ಹಣವನ್ನೂ ಕೊಡಲಿಲ್ಲ. ಬಡ್ಡಿಯನ್ನೂ ಮನ್ನಾ ಮಾಡಲಿಲ್ಲ. ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿಯೂ ಪರಿವರ್ತನೆ ಮಾಡಲಿಲ್ಲ. ಹಾಗಾಗಿ ಸರ್ಕಾರದವರು ಏನು ಮಾಡುತ್ತಿದ್ದಾರೆ ಎಂಬುದನ್ನೂ ನಾವು ಕೇಳಬೇಕಾಗುತ್ತದೆ. ಮೊನ್ನೆ ಮುಖ್ಯಮಂತ್ರಿಗಳು ನರಗುಂದಕ್ಕೆ ನವಲಗುಂದಕ್ಕೆ ಬಂದು ಹೋದರು. ಬರಗಾಲ ಕಾಮಗಾರಿಗಳ ವೀಕ್ಷಣೆಗೆ ಬಂದಿದ್ದರೋ ಅಥವಾ ನರಗುಂದದಲ್ಲಿ ಬಿಸಿಯೂಟದಿಂದಾಗಿ ಅವಾಂತರವಾಗಿದ್ದು, ನಾಲ್ಕೈದು ಜನ ವಿದ್ಯಾರ್ಥಿಗಳು ಆಸ್ಪತ್ರೆ ಸೇರಿದ್ದರು, ಅವರನ್ನು ನೋಡಲು ಬಂದರೋ ಯಾರಿಗೂ ಏನೂ ಗೊತ್ತಾಗಲಿಲ್ಲ. ಹೆಲಿಕಾಪ್ಟರ್ ಮುಖಾಂತರ ಬಂದರು. ಅವರು ಅಲ್ಲಿಗೆ ಬರುವುದು, ಅಲ್ಲಿನ ಉಸ್ತುವಾರಿ ಮಂತ್ರಿಗಳಾದ ಗದ್ದಿಯವರಿಗೂ ಗೊತ್ತಿರಲಿಲ್ಲ.

ಶ್ರೀ ಎನ್.ಎಸ್. ಬೋಸರಾಜ್ : ಸನ್ಮಾನ್ಯ ಉಪಾಧ್ಯಕ್ಷರೇ.....

ಶ್ರೀ ಜಗದೀಶ್ ಶೆಟ್ಟರ್ : ಹಾಗಾದರೆ ನಾವು ಏನೂ ಮಾತನಾಡುವುದು ಬೇಡವೇ? ಅದನ್ನು ತಮಗೇ ಬಿಡುತ್ತೇನೆ ಉಪಾಧ್ಯಕ್ಷರೇ. ಈಗ ನಾನು ಯಾರಿಗೂ ಯೀಲ್ಡ್ ಆಗಿಲ್ಲ.

ಉಪಾಧ್ಯಕ್ಷರು : ನೀವು ಮಾತನಾಡಿ ಎಂದು ನಿಮಗೆ ಅವಕಾಶ ಕೊಟ್ಟಿದ್ದೇನೆ. ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಇವರು ಏಕೆ ಹೀಗೆ ಮಾಡುತ್ತಿದ್ದಾರೆ ಎಂಬುದು ಅರ್ಥವೇ ಆಗುತ್ತಿಲ್ಲ, ಹೀಗಾದರೆ ನಾವು ಹೇಗೆ ಮಾತನಾಡುವುದು?

ಶ್ರೀ ಶಿವಾನಂದ ಎಸ್. ಪಾಟೀಲ್ : ಉಪಾಧ್ಯಕ್ಷರೇ, ನೀವು ಬೋಸರಾಜುರವರಿಗೆ ಹೇಳಬೇಕು. ಒಂದು ಡೆಕೋರಂ ಇದೆ, ಮಾತನಾಡಲು ಒಂದು ಅರ್ಥವಿದೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಈ ರೀತಿ ಇಂಟರ್‌ವೀನ್ ಮಾಡಿದರೆ ಹೇಗೆ? ಹೀಗಾದರೆ ಅವರು ಏಕೆ ಮಾತನಾಡಬೇಕು? ನೀವು ಸುಮ್ಮನೆ ಬಿಟ್ಟುಬಿಡಿ ಶೆಟ್ಟರ್‌ರವರೇ.

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಏನು ಮಾತನಾಡುತ್ತಾರೋ ಮಾತನಾಡಲಿ. ಅವರಿಗೆ ಏನಾಗುತ್ತಿದೆ ನೋಡೋಣ.

ಉಪಾಧ್ಯಕ್ಷರು : ಇವರಿಗೆ ಮಾತನಾಡಲು ಅವಕಾಶ ಕೊಟ್ಟಿದ್ದೇನೆ. ಈಗ ಮತ್ತೊಬ್ಬರು ಮಾತನಾಡುವುದು ಬೇಡ.

ಶ್ರೀ ಎ. ರಾಮದಾಸ್ : ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರು ಮಧ್ಯೆ ಮಾತನಾಡುತ್ತಾರೆ. ಅವರನ್ನು ಕರೆಯಬೇಕಾಗಿತ್ತೇ?

ಉಪಾಧ್ಯಕ್ಷರು : ನಾನು ಹೇಳುತ್ತಿರುವಾಗ ನೀವು ಏಕೆ ಮಾತನಾಡುತ್ತಿದ್ದೀರಿ. ನೀವು ಕುಳಿತುಕೊಳ್ಳಿ. ನೀವು ಎದ್ದರೆ, ಮತ್ತೆ ಅವು ಏಳುತ್ತಾರೆ. ನೀವು ಕುಳಿತುಕೊಳ್ಳಿ. ನೀವು ಮುಂದುವರೆಸಿ.

ಶ್ರೀ ಜಗದೀಶ್ ಶೆಟ್ಟರ್ : ಮುಖ್ಯಮಂತ್ರಿಗಳು ಬಂದು ಬರಗಾಲ ವೀಕ್ಷಣೆ ಮಾಡಲಿ, ಬಿಸಿಯೂಟದ ಅವಾಂತರದಿಂದ ವಿದ್ಯಾರ್ಥಿಗಳಿಗೆ ಎಲ್ಲೆಲ್ಲಿ ತೊಂದರೆಯಾಗಿದೆ ಎಂದು ನೋಡಿಕೊಂಡು ಹೋಗಲಿ. ಆದರೆ ಇದು ನಿರಂತರ ಪ್ರಕ್ರಿಯೆಯಾಗಬೇಕು. ಎಲ್ಲೋ ಒಂದು

ಕಡೆಗೆ ಸರ್‌ಪ್ರೈಸ್‌ಆಗಿ ವಿಸಿಟ್ ಮಾಡಿ ಹೋಗುವುದಿಲ್ಲ. ಅವರು ಬರುವುದು ಅಲ್ಲಿನ ಉಸ್ತುವಾರಿ ಮಂತ್ರಿಗಳಿಗೆ ಗೊತ್ತಿಲ್ಲ, ಶಾಸಕರಿಗೆ ಗೊತ್ತಿಲ್ಲ, ವಿವಿಧ ಹಂತದಲ್ಲಿ ಜನಪ್ರತಿನಿಧಿಗಳಿಗೆ ಗೊತ್ತಿಲ್ಲ.

ಉಪಾಧ್ಯಕ್ಷರು : ಅವರು ಬಂದದ್ದು ತಪ್ಪು ಎಂದು ಹೇಳುತ್ತಿರುವಿರಾ?

ಶ್ರೀ ಜಗದೀಶ್ ಶೆಟ್ಟರ್ : ಅದು ತಪ್ಪು ಎಂದು ಹೇಳುವುದಿಲ್ಲ. ಅದೇ ರೀತಿ ಅವರು ಎಲ್ಲಾ ಕಡೆಗೂ ಬರಲಿ. ಯಾರಿಗೂ ಗೊತ್ತಾಗದೇ ಬಂದರೆ ಏನಾಗುತ್ತದೆಂದರೆ, ಅಲ್ಲಿ ಜನ ತಮ್ಮ ಭಾವನೆಗಳನ್ನು ಎಕ್ಸ್‌ಪ್ರೆಸ್ ಮಾಡಲು ಆಗುವುದಿಲ್ಲ. ನಿಜವಾದ ವಸ್ತುಸ್ಥಿತಿ ಅವರಿಗೆ ತಿಳಿಯುವುದಿಲ್ಲ. ಅಧಿಕಾರಿಗಳು ಅವರನ್ನು ಎಲ್ಲೋ ಒಂದು ಕಡೆಗೆ ಕರೆದುಕೊಂಡು ಹೋಗುತ್ತಾರೆ. ಅಲ್ಲಿ ಹೋಗಿ, ಬರಗಾಲ ಕಾಮಗಾರಿ ಹೇಗೆ ನಡೆದಿದೆ ಎಂದು ಕೇಳುತ್ತಾರೆ ಅವರು ಚೆನ್ನಾಗಿದೆ ಎಂದರೆ ಮುಗಿಯಿತು. ಆದರೆ ಅಲ್ಲಿ ಜನಗಳಿದ್ದರೆ ವಸ್ತುಸ್ಥಿತಿ ಏನು ಎಂಬುದು ತಿಳಿಯುತ್ತದೆ. ನೀವು ಸರ್‌ಪ್ರೈಸ್ ವಿಸಿಟ್ ಮಾಡುವುದಿದ್ದರೆ, ಅದನ್ನು ಬೇರೆ ಮಾಡಿ. ಈ ರೀತಿ ಕೆಲವು ಸರ್‌ಪ್ರೈಸ್ ವಿಸಿಟ್‌ಗಳನ್ನು ಮಾಡುತ್ತೇವೆಂದು ಮಾಡಿ. ಆದರೆ ನರಗುಂದಕ್ಕೆ ಅವರು ಯಾರಿಗೂ ಗೊತ್ತಾಗದ ರೀತಿಯಲ್ಲಿ ಬಂದು ಹೋದರು. ಏಕೆ ಬಂದು ಹೋದರು ಎಂಬುದು ಗೊತ್ತಾಗಲಿಲ್ಲ. ನಿಮ್ಮ ಕೆಪಿಸಿಸಿ ಅಧ್ಯಕ್ಷರಾದ ಜನಾರ್ಧನ ಪೂಜಾರಿಯವರು ಕಲಘಟಗಿಗೆ ಬಂದು ಒಂದು ಕೆರೆ ನೋಡಿಕೊಂಡು ಹೋದರು. ಅಲ್ಲಿ ಸರಿಯಾಗಿ ಕೆಲಸ ಆಗಿಲ್ಲ ಎಂದು ಅಲ್ಲಿನ ಉಸ್ತುವಾರಿ ಸಚಿವರಾದ ಗದ್ದಿಯವರಿಗೆ ಛೀಮಾರಿ ಹಾಕಿ ಹೋದರು. ಎಲ್ಲೂ ಏನು ಅವ್ಯವಹಾರವಾಗಿಲ್ಲ ಎಂದು ಇವರು ಹೇಳುತ್ತಿದ್ದಾರಲ್ಲಾ, ಆದರೆ ಅವರು ಕಲಘಟಗಿಯಲ್ಲಿ ಒಂದು ಕೆರೆಗೆ ಭೇಟಿ ಕೊಟ್ಟರು, ಅಲ್ಲಿಯ ಗ್ರಾಮಸ್ಥರು ಅಲ್ಲಿ ಸರಿಯಾಗಿ ಕೆಲಸವಾಗಿಲ್ಲ ಎಂದು ಹೇಳಿದರು, ಆಗ ಅವರು ಉಸ್ತುವಾರಿ ಸಚಿವರಿಗೆ ಛೀಮಾರಿ ಹಾಕಿ ಹೋದರಲ್ಲಾ, ಇದರ ಬಗ್ಗೆಯೂ ಸರ್ಕಾರದವರು ಹೇಳಬೇಕಾಗುತ್ತದೆ. ಹಾಗಾಗಿ ಇದರಲ್ಲಿ ಬಹಳಷ್ಟು ಕಡೆಗಳಲ್ಲಿ ಅವ್ಯವಹಾರವಾಗಿದ್ದು, ಕೋಟ್ಯಾಂತರ ರೂಪಾಯಿ ಹಣ ಲೂಟಿಯಾಗಿರುವಂಥಾದ್ದು ಇದೆ. ಅದರ ಬಗ್ಗೆ ನಾನು ಹಲವಾರ ಉದಾಹರಣೆಗಳನ್ನು ಕೊಡಬಯಸುತ್ತಿದ್ದೇನೆ. ಬರಗಾಲ ಕಾಮಗಾರಿಗಳು ಸರಿಯಾಗಿ ನಡೆಯದಿರುವ ಇಂಥ ಪರಿಸ್ಥಿತಿಯಲ್ಲಿ, ನಮ್ಮ ರೈತಬಾಂಧವರೂ ಸಹ ತಾವು ಮಾಡಿರುವ ಸಾಲವನ್ನು ತೀರಿಸಲಾರದ ಪರಿಸ್ಥಿತಿಯಲ್ಲಿದ್ದಾರೆ ಮತ್ತು ಬಡ್ಡಿಯನ್ನೂ ಕೊಡಲಾರದಂಥ ಪರಿಸ್ಥಿತಿಯಿದೆ. ಆರು ತಿಂಗಳ ಬಡ್ಡಿ ಮನ್ನಾ ಮಾಡುತ್ತೇವೆ ಎಂದು ನೀವು ಆದೇಶ ಮಾಡಿದಿರಿ. ಆದರೆ ಆ ಆದೇಶ ಸರಿಯಾಗಿ ಬರಲಿಲ್ಲ. ಇವತ್ತಿಗೂ ಸೊಸೈಟಿಗಳಿಗೆ ಸರಿಯಾಗಿ ಆ ಆದೇಶ ಹೋಗಿಲ್ಲ. ಹಾಗಾಗಿ ರೈತರು ಅಲ್ಲಿನ ಅಧಿಕಾರಿಗಳ ಜೊತೆ ಜಗಳ ಮಾಡುತ್ತಿದ್ದಾರೆ. ಸಂಘರ್ಷ ಮಾಡುತ್ತಿದ್ದಾರೆ. ಸರಿಯಾದ ಮಾಹಿತಿ, ಸೂಚನೆ ಇಲ್ಲದೇ ಇರುವುದರಿಂದ ಅವರು ಪರದಾಟ ಮಾಡುತ್ತಿದ್ದಾರೆ. ಅಲ್ಲದೆ, ಆ ಬಡ್ಡಿ ಮನ್ನಾ ಆದೇಶ ಕೆಲಸಕ್ಕೆ ಮಾತ್ರ ಅನ್ವಯವಾಗಿದೆ. ಕೆಲವಕ್ಕೆ ಅನ್ವಯವಾಗಿಲ್ಲ. ಪಿ.ಎಲ್.ಡಿ ಬ್ಯಾಂಕುಗಳು ಎಲ್ಲಾ ಕಡೆಯೂ ಇವೆ. ಆ ಪಿ.ಎಲ್.ಡಿ. ಬ್ಯಾಂಕುಗಳ ಆರು ತಿಂಗಳ ಬಡ್ಡಿ ಮನ್ನಾ ಎಂದು ನೀವು ಮಾಡಿದಿರಿ. ನಿಜವಾಗಿ ಹೇಳಬೇಕೆಂದರೆ, ಕನಿಷ್ಠ ನೀವು ಮೂರು ವರ್ಷಗಳ ಬಡ್ಡಿಯನ್ನು ಮನ್ನಾ ಮಾಡಬೇಕಿತ್ತು. ಇವತ್ತು ನೀವು ಯಾರ್ಯಾರಿಗೋ ವಿನಾಯಿತಿ ಕೊಡುತ್ತಿದ್ದೀರಿ. ಹಿರಿಯ ಮಂತ್ರಿಗಳಾದ ಘೋರ್ಪಡೆಯವರ ಫ್ಯಾಕ್ಟರಿಗೆ ಸಂಬಂಧಿಸಿದಂತೆ ನೀವು 45–50 ಕೋಟಿ ರೂ.ಗಳಿಗೂ ಹೆಚ್ಚು ವಿದ್ಯುತ್ ಬಿಲ್ ಬಾಕಿಗೆ ವಿನಾಯಿತಿ ನೀಡುತ್ತೀರಿ. ಬೇರೆ ಬೇರೆ ಹಂತಗಳಲ್ಲಿ ಬೇರೆ ಬೇರೆ ಕೈಗಾರಿಕೆಗಳಿಗೆ

ನೂರಾರು ಕೋಟಿ ರೂ.ಗಳ ವಿನಾಯಿತಿಗಳನ್ನು ನೀಡುತ್ತೀರಿ. ಆದರೆ ನಮ್ಮ ರೈತಬಾಂಧವರ ಮೂರು ವರ್ಷಗಳ ಬಡ್ಡಿಯನ್ನು ಮನ್ನಾ ಮಾಡಲು ನಿಮಗೆ ಆಗುತ್ತಿಲ್ಲ.

2.20 ಪಿ.ಎಂ.

ಮೂರು ವರ್ಷದ ಬಡ್ಡಿ ಮನ್ನಾ ಮಾಡಿದರೆ ಅದು ಸುಮಾರು 200 ರಿಂದ 300 ಕೋಟಿ ರೂಪಾಯಿಗಳು ಆಗಬಹುದು. ಅದನ್ನು ಮಾಡಬಹುದಾಗಿತ್ತು. ಅದನ್ನು ಮಾಡಿದ್ದರೆ ರೈತ ಬಾಂಧವರು ಅವರ ಜೀವನವನ್ನು ಸುಗಮವಾಗಿ ಸಾಗಿಸಲಿಕ್ಕೆ ಏನೋ ಒಂದು ಆಧಾರಸ್ಥಂಭ ಸಿಗುತ್ತಿತ್ತು. ಅದನ್ನು ಮಾಡಲಿಲ್ಲ. ಬರಗಾಲ ಕಾಮಗಾರಿ ಎಂದು ತೆಗೆದುಕೊಂಡು ಅದನ್ನು ಸಹ ರೈತರಿಗೆ ಸರಿಯಾಗಿ ಮುಟ್ಟಿಸಲಿಲ್ಲ. ಬೆಳೆವಿಮೆಯನ್ನೂ ಸಹ ರೈತರಿಗೆ ಸರಿಯಾಗಿ ಕೊಡುತ್ತಿಲ್ಲ. ಮಾನ್ಯ ಕೌಜಲಗಿಯವರು ಇಷ್ಟು ಹೊತ್ತು ಸದನದಲ್ಲಿ ಇದ್ದವರು ಹೊರಗೆ ಹೋಗಿಬಿಟ್ಟಿದ್ದಾರೆ. ಕೃಷಿಸಚಿವರಾಗಿ ಅವರು ಇಲ್ಲಿ ಇರಬೇಕಾಗಿತ್ತು. ಇದರಿಂದ ಸರ್ಕಾರಕ್ಕೆ ಈ ವಿಷಯದ ಬಗ್ಗೆ ಎಷ್ಟು ನೆಗ್ಲಿಜೆನ್ಸ್ ಇದೆ ಎನ್ನುವುದು ಗೊತ್ತಾಗುತ್ತದೆ. ಮಾನ್ಯ ಕೃಷಿ ಸಚಿವರಿಗೆ ಸಹ ಇದರ ಬಗ್ಗೆ ಕಾಳಜಿ ಇಲ್ಲ. ಮಾನ್ಯ ಕೃಷಿ ಸಚಿವರು ರಾಮದುರ್ಗದಲ್ಲಿ ಒಂದು ಹಳ್ಳಿಗೆ ಹೋಗಿದ್ದರು. ಅಲ್ಲಿ ಇದ್ದಂಥ ಗ್ರಾಮಸ್ಥರು ನೋಡಿ, ರಾಮದುರ್ಗ ತಾಲ್ಲೂಕಿನಲ್ಲಿ ಇಂಥ ಕಡೆ ಕೆರೆ ಹೂಳು ತೆಗೆದಿದ್ದು ಸರಿಯಾಗಿ ಮಾಡಿಲ್ಲ, ಇದರಲ್ಲಿ ಅವ್ಯವಹಾರ ಆಗಿದೆ: ಎಂದು ಅವರ ಮುಂದೆ ಹೇಳಿದರು. ಆವಾಗ ಇವರು – ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆ ಬಗ್ಗೆ ಎನ್‌ಕ್ವಯರಿ ಮಾಡಿಸುತ್ತೇನೆ. ಎಂದು ಹೇಳಿದರು. ಆದರೆ ಇವತ್ತಿನವರೆಗೂ ಎನ್‌ಕ್ವಯರಿ ಇಲ್ಲ, ಕ್ರಮ ಸಹ ಇಲ್ಲ. ಯಾವ ಹಳ್ಳಿಗೆ ಹೋಗಿದ್ದರು ಎನ್ನುವುದನ್ನೂ ನಾನು ಹೇಳುತ್ತೇನೆ. ಸರ್ಕಾರದ ಕಡೆಯಿಂದ 320 ಕೋಟಿ ರೂಪಾಯಿಗಳನ್ನು ಬೆಳೆ ವಿಮೆ ರೂಪದಲ್ಲಿ ರೈತರಿಗೆ ಕೊಡಬೇಕಾಗಿತ್ತು. ಆ ಬೆಳೆವಿಮೆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಅಲ್ಲಿ ಇನ್ಸೂರೆನ್ಸ್ ಕಂಪನಿಗೆ ಜನ ಅಡ್ಡಾಡುತ್ತಿದ್ದಾರೆ. ಸೊಸೈಟಿಗಳಿಗೆ ಜನ ಅಡ್ಡಾಡುತ್ತಿದ್ದಾರೆ. ಆದರೆ ಅದು ಇನ್ನು ಬಿಡುಗಡೆಯಾಗಿಲ್ಲ. ಧಾರವಾಡ ಡಿ.ಸಿ.ಸಿ ಬ್ಯಾಂಕ್ ಯಾವ ತರಹ ಅಧೋಗತಿಗೆ ಇಳಿದಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ರಾಜ್ಯದ ಬೇರೆ ಬೇರೆ ಸ್ಥಳಗಳಲ್ಲಿ ಇದೇ ರೀತಿಯ ಪರಿಸ್ಥಿತಿ ಇದೆ. ಆ ಸೊಸೈಟಿಗಳಿಂದ ನಮ್ಮ ರೈತಬಾಂಧವರಿಗೆ ಹೊಸದಾಗಿ ಸಾಲ ಸಿಗುತ್ತಿಲ್ಲ. ಬೆಳೆವಿಮೆ ಹಣವನ್ನು ರೈತರ ಸಾಲಕ್ಕೆ ಹೊಂದಾಣಿಕೆ ಮಾಡಿಕೊಳ್ಳುವಂಥದ್ದು ನಡೆಯುತ್ತಿದೆ. ಈ ಕೋ–ಆಪರೇಟೀವ್ ಸೊಸೈಟಿಗಳಲ್ಲಿ ಅವರ ಸಾಲಕ್ಕೆ ಬೆಳೆವಿಮೆ ಹಣದಿಂದ ಹೊಂದಾಣಿಕೆ ಮಾಡಿಕೊಳ್ಳುವುದಕ್ಕೆ ಏನಾದರೂ ನಿಯಮಗಳು ಇವೆಯೇ? ಬೆಳೆ ವಿಮೆಗೆ ಬಂದಂಥ ಹಣವನ್ನು ರೈತರ ಸಾಲಕ್ಕೆ ಅಡ್ಜಸ್ಟ್ ಮಾಡುವಂಥ ನಿಯಮ ಏನಾದರೂ ಇದೆಯೇ ಎಂದು ನಾನು ಕೇಳುತ್ತಿದ್ದೇನೆ. ಆ ರೀತಿಯ ನಿಯಮ ಎಲ್ಲೂ ಇಲ್ಲ. ಆದರೆ ದುರ್ಬ್ಯೆವದಿಂದ ಬೆಳೆ ವಿಮೆ ಹಣವನ್ನು ಸೊಸೈಟಿ ಸಾಲಕ್ಕೆ, ಇನ್ನಿತರ ಸಾಲಕ್ಕೆ ಅಡ್ಜಸ್ಟ್ ಮಾಡುವಂಥದ್ದು ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ. ಇದು ಸರಿಯಾದುದಲ್ಲ. ಮಾನ್ಯ ಮಂತ್ರಿಗಳು ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುತ್ತದೆ. ಬೆಳೆವಿಮೆ ಹಣವನ್ನು ನೀವು ಏಕೆ ಅಡ್ಜಸ್ಟ್ ಮಾಡುತ್ತಿದ್ದೀರಿ? ಎಲ್ಲೋ ಒಂದಿಷ್ಟು ಕಡೆ ಮಳೆಯಾದಂಥ ಸಂದರ್ಭದಲ್ಲಿ ಇವತ್ತು ನಮ್ಮ ರೈತ ಬಾಂಧವರು ಬಿತ್ತನೆ ಮಾಡಬೇಕೆಂದು ಆ ಸಾಲ ಕೇಳುವುದಕ್ಕೆ ಹೋದರೆ ಸಾಲ ಕೊಡುವುದಿಲ್ಲ, ಅಥವಾ ಬೆಳೆವಿಮೆ ಹಣ ಬಂದರೆ ಆ ಬೆಳೆ ಹಣವನ್ನು ಉಪಯೋಗಿಸಿಕೊಳ್ಳಲಾರದಂಥ ಪರಿಸ್ಥಿತಿ ಅವರಿಗೆ ಇದೆ. ಇಂಥ ಅತಂತ್ರ ಪರಿಸ್ಥಿತಿಯಲ್ಲಿ

ಅವರು ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಹಾಗೆಯೇ ಇತ್ತೀಚೆಗೆ ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆದು, ಸಾಲ ವಸೂಲಾತಿ ಮಾಡಬಾರದೆಂದು ಒಂದು ಕಡೆಯಲ್ಲಿ ಇನ್‌ಸ್ಟ್ರಕ್ಷನ್ ಇದೆ, ಮತ್ತು ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕೆಂದು ಸೂಚನೆ ಇದೆ. ಆದರೆ ಅದನ್ನು ಮೀರಿ ಇವತ್ತು ಸಾಲ ವಸೂಲಾತಿ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಆದ್ದರಿಂದ ಸಾಲ ವಸೂಲಾತಿಯನ್ನು ನಿಲ್ಲಿಸುತ್ತೀರಾ ಹೇಗೆ? ಕನಿಷ್ಟ ಎರಡು ವರ್ಷ ಈ ಸಾಲ ವಸೂಲಾತಿಯನ್ನು ನಿಲ್ಲಿಸಿರಿ. ಸಾಲ ವಸೂಲಾತಿಯನ್ನು ಏಕೆ ನಿಲ್ಲಿಸುವುದಕ್ಕಾಗುತ್ತಿಲ್ಲ? ಏಕೆ ನೀವು ಸ್ಟ್ರಿಕ್ಟ್ ಆಗಿ ಇನ್‌ಸ್ಟ್ರಕ್ಷನ್ ಕೊಡುತ್ತಿಲ್ಲ? ಸಾಲ ವಸೂಲಾತಿಯನ್ನು ದೊಡ್ಡ ಪ್ರಮಾಣದಲ್ಲಿ ಏಕೆ ನೀವು ಮಾಡುತ್ತಿದ್ದೀರಿ? ಅಂದರೆ ಪೂರ್ತಿಯಾಗಿ ರೈತರ ಮಾರಣಹೋಮವನ್ನು ಮಾಡಬೇಕೆಂದು ಇದ್ದೀರೋ ಹೇಗೆ ಎನ್ನುವಂಥದ್ದನ್ನು ನಾನು ಇವತ್ತು ಕೇಳಬೇಕಾಗುತ್ತದೆ. ಈ ರೀತಿಯಾದಂಥ ಪರಿಸ್ಥಿತಿ ಗ್ರಾಮೀಣ ಪ್ರದೇಶದಲ್ಲಿ ಇದ್ದು ನಮ್ಮ ರೈತಬಾಂಧವರು ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ದನಕರುಗಳು ಬೇರೆ ಬೇರೆ ರಾಜ್ಯಗಳ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುತ್ತಿದ್ದು, ಆ ಜಾನುವಾರುಗಳು ಕಟುಕರ ಪಾಲಾಗುತ್ತಿದೆ. ಈ ರೀತಿಯ ಪರಿಸ್ಥಿತಿ ಇವತ್ತು ರಾಜ್ಯದಲ್ಲಿ ಇದೆ. ಇನ್ನು ಗೋಶಾಲೆಗಳ ಬಗ್ಗೆ ಹೇಳುವುದಾದರೆ, ಎಷ್ಟು ಕಡೆ ಗೋಶಾಲೆಗಳನ್ನು ತೆರೆದಿದ್ದೀರಿ? ದಯವಿಟ್ಟು ಈ ಬಗ್ಗೆ ಲೆಕ್ಕ ಕೊಡಬೇಕು. ಪ್ರತಿಯೊಂದು ತಾಲ್ಲೂಕಿಗೆ ಕನಿಷ್ಟಪಕ್ಷ ನಾಲ್ಕು ಗೋಶಾಲೆಗಳನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದೀರಲ್ಲವೇ, ಆದರೆ ಒಂದೊಂದು ತಾಲ್ಲೂಕಿಗೆ ಒಂದೊಂದು ಗೋಶಾಲೆಗಳನ್ನು ಸಹ ನೀವು ಮಾಡಿಲ್ಲ. ಒಂದು ಕಡೆ ಹೋಬಳಿಗೊಂದು ಗೋಶಾಲೆ ಪ್ರಾರಂಭ ಮಾಡುತ್ತೇವೆಂದು ಹೇಳಿದಿರಿ. ಆದರೆ ಅದನ್ನು ಮಾಡಲಿಲ್ಲ. ಏಕೆ ಮಾಡಲಿಲ್ಲ? ಮೊನ್ನೆಯ ದಿವಸ ನಾನು ಕೊಪ್ಪಳ, ಯಲ್‌ಬುರ್ಗಾ ತಾಲ್ಲೂಕಿನ ಒಂದು ಗೋಶಾಲೆಗೆ ಹೋಗಿದ್ದೆ. ಅಲ್ಲಿ 2–3 ಸಾವಿರ ಜಾನುವಾರುಗಳು ಇದ್ದವು. ಸಾವಿರಾರು ಜಾನುವಾರುಗಳು ಬರುತ್ತಿರುತ್ತವೆ, ಹೋಗುತ್ತಿರುತ್ತವೆ. ನಾನು ಆ ಗೋಶಾಲೆಗೆ ಹೋಗುವಾಗ ನೂರಾರು ಜಾನುವಾರುಗಳು ವಾಪಸ್ಸು ಬರುತ್ತಿದ್ದವು. ನಾನು ಆ ರೈತನನ್ನು – ವಾಪಸ್ಸು ಏಕೆ ಹೋಗುತ್ತಿದ್ದೀರಿ. ಎಂದು ಕೇಳಿದೆ. ಇಲ್ಲರೀ, ಅಲ್ಲಿ ಕುಡಿಯುವುದಕ್ಕೆ ನೀರಿನ ವ್ಯವಸ್ಥೆ ಇಲ್ಲ ಅದಕ್ಕೆ ನಾವು ವಾಪಸ್ಸು ಹೋಗುತ್ತಿದ್ದೇವೆ ಎಂದು ಹೇಳಿದ. ಮೇವಿನ ಕೊರತೆ ಆಗಿದೆ. ನಾವು ಅಲ್ಲಿ ಹೋಗಿ ನಮ್ಮ ಜಾನುವಾರುಗಳನ್ನು ಸಾಯಿಸಬೇಕೇ, ಹೇಗೆ ಎಂದು ಕೇಳಿದರು. ನಾವು ವಾಪಸ್ಸು ಜಾನುವಾರುಗಳನ್ನು ತೆಗೆದುಕೊಂಡು ಹೋಗುತ್ತಿದ್ದೇವೆ, ಬೇರೆ ಎಲ್ಲೋ ಒಂದು ಕಡೆ ವ್ಯವಸ್ಥೆ ಮಾಡಿ ನೀರು ಕುಡಿಸುತ್ತೇವೆ. ಎಂದು ಹೇಳಿ ಹೋದರು. ನಾನೇ ಸ್ವತಃ ಹೋಗಿ ನೋಡಿದ್ದೇನೆ. 4–5 ಸಾವಿರ ಜಾನುವಾರುಗಳ ಇವೆ. ಅಲ್ಲಿ ಕುಡಿಯಲಿಕ್ಕೆ ನೀರಿನ ವ್ಯವಸ್ಥೆಯೇ ಇಲ್ಲ. ಅಲ್ಲಿ ಇದ್ದಂಥ ನೀರು ಪೂರ್ತಿ ರಾಡಿಯಾಗಿದೆ. ಒಂದು ಬೋರ್‌ವೆಲ್ ಇದೆ, ಅದರಲ್ಲಿ ಒಂದು ಟ್ಯಾಂಕ್ ಕಟ್ಟಿದ್ದಾರೆ. ಅದರಲ್ಲಿರುವ ನೀರು ಹೊಲಸಾಗಿದೆ. ಅಲ್ಲಿಯೇ ಮೈಕೈ ತೊಳೆಯುವಂಥದ್ದು, ಅಲ್ಲಿಯೇ ನೀರು ಕುಡಿಸುವಂಥದ್ದು, ಆ ದನಕರುಗಳೂ ಸಹ ಅಂಥ ನೀರನ್ನು ಕುಡಿಯುವುದಕ್ಕೆ ಸಾಧ್ಯವಿಲ್ಲ. ಅಂಥ ನೀರು ಅಲ್ಲಿದೆ. ಅದನ್ನು ಬದಲಿ ಮಾಡಿ ಇನ್ನೊಂದು ಕಡೆ ಬೋರ್ ಕೊರೆದು ನೀರಿನ ವ್ಯವಸ್ಥೆ ಮಾಡಿ ಎಂದು ನಾನು ಹೇಳಿ ಬಂದೆ. ಆ ಮೇಲೆ ಮೇವು ಎಲ್ಲಾ ಕಡೆ ಸಿಗುತ್ತಿಲ್ಲ. ಅಲ್ಲಿದ್ದಂಥ ಕೊಪ್ಪಳ ಡಿ.ಸಿ.ಯವರ ಜೊತೆ ನಾನು ಚರ್ಚೆ ಮಾಡಿದೆ. ಆಗ ಕೊಪ್ಪಳ ಡಿ.ಸಿ.ಯವರು– ಇಲ್ಲರೀ, ಮೇವು ನಮಗೆ ಎಷ್ಟು ಬೇಕಾಗಿತ್ತೋ ಅಷ್ಟು ಸಿಗುತ್ತಿಲ್ಲ. ಸಪ್ಲೈ ಇಲ್ಲ, ನಾನು ಬೇರೆ

ಕಡೆಯಿಂದ ತರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅದು ಆಗುತ್ತಿಲ್ಲ. ಎಂದು ಇಷ್ಟೊಂದು ಅಸಹಾಯಕತೆಯನ್ನು ಅವರು ನನಗೆ ಹೇಳಿದರು. ಹಾಗಾದರೆ ಇಷ್ಟೊಂದು ಅಸಹಾಯಕತೆ ಇದ್ದಂಥ ಸಂದರ್ಭದಲ್ಲಿ ಆ ಬಗ್ಗೆ ಸರ್ಕಾರಕ್ಕೆ ರಿಪೋರ್ಟ್‌ನ್ನು ಅವರು ಕೊಡುವುದಿಲ್ಲವೇ? ನಿಮ್ಮ ತಾಲ್ಲೂಕು ಕಚೇರಿಯಿಂದ, ಡಿ.ಸಿ.ಯವರಿಂದ ಈ ಮೇವಿನ ಕೊರತೆ ಇರುವ ಬಗ್ಗೆ ಸರ್ಕಾರಕ್ಕೆ ರಿಪೋರ್ಟ್ ಬರುತ್ತದೆಯಲ್ಲವೇ ಡಿ.ಸಿ.ಯವರು ಅಪೋಜಿಷನ್ ಲೀಡರ್ ಮುಂದೆ ಈ ರೀತಿ ಹೇಳುತ್ತಾರೆಂದರೆ ಸರ್ಕಾರಕ್ಕೆ, ನಿಮಗೆ ರಿಪೋರ್ಟ್ ಕೊಟ್ಟಿರಬೇಕಲ್ಲವೇ? ಹಾಗಾದರೆ ಆ ರಿಪೋರ್ಟ್ ಆಧಾರದ ಮೇಲೆ ಆ ಮೇವಿನ ಕೊರತೆಯನ್ನು ನೀಗಿಸಲಿಕ್ಕೆ, ಬೇರೆ ರಾಜ್ಯದಿಂದ ತರಿಸಲಿಕ್ಕೆ, ಬೇರೆ ಜಿಲ್ಲೆಗಳಿಂದ ತರಿಸಲಿಕ್ಕೆ ನಿಮ್ಮ ಪ್ರಯತ್ನ ಏನು? ಆ ಪ್ರಯತ್ನ ಕೂಡ ಇವತ್ತು ಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಹೀಗಾಗಿ ಸಾಲದ ಬಡ್ಡಿಯನ್ನು ಕಟ್ಟಲಾರದಂಥ ಪರಿಸ್ಥಿತಿಯಲ್ಲಿ ರೈತರು ಜಿಗುಪ್ಸೆಗೊಂಡು ರೈತರ ಆತ್ಮಹತ್ಯೆ ಸರಣಿ ನಡೆಯುತ್ತಿದೆ. ರಾಜ್ಯದಲ್ಲಿ ಆತ್ಮಹತ್ಯೆ ಸರಣಿ ಅಂದರೆ ಒಂದು ಕಡೆ ರೈತರ ಆತ್ಮಹತ್ಯೆ ಸರಣಿ, ಇನ್ನೊಂದು ಕಡೆ ಬಿಸಿಯೂಟ ಅಂದರೆ 'ಅಕ್ಷರ ದಾಸೋಹ'ದಲ್ಲಿ ಅನಾರೋಗ್ಯಪೀಡಿತರಾಗಿ ಮಕ್ಕಳು ಸಾವಿರಾರು ಸಂಖ್ಯೆಯಲ್ಲಿ ಇವತ್ತು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಬಲಿಪಶುಗಳಾಗಿದ್ದಾರೆ. ಮರಣ ಹೊಂದಿದ್ದಾರೆ. ಗ್ರಾಮೀಣ ಕೃಪಾಂಕದ ವಿಚಾರದಲ್ಲಿ ಸಹ ಆತ್ಮಹತ್ಯೆಗಳು ಪ್ರಾರಂಭವಾಗಿವೆ. ನಿಮ್ಮ ಸರ್ಕಾರದ ನಿರ್ಲಕ್ಷತನದಿಂದ ಈ ರೀತಿಯ ಗೊಂದಲ ನಿರ್ಮಾಣವಾಗಿ ಗ್ರಾಮೀಣ ಕೃಪಾಂಕದಲ್ಲಿ ಆಯ್ಕೆಯಾಗಿ ಕೆಲಸ ಮಾಡುತ್ತಿದ್ದ ನೌಕರರು ಇನ್‌ಸೆಕ್ಯುರಿಟಿಯಿಂದ ಬೀದಿಗೆ ಬೀಳುವಂಥದ್ದು, ಇದರಿಂದ ಆತ್ಮಹತ್ಯೆ ಮಾಡಿಕೊಳ್ಳುವುದು ಆರಂಭವಾಗಿದೆ. ಈ ಸರ್ಕಾರ ಆತ್ಮಹತ್ಯೆಯ ಸರ್ಕಾರ ಎಂದು ಹೇಳಬೇಕಾಗುತ್ತದೆ. ರಾಜ್ಯದಲ್ಲಿ ಆತ್ಮಹತ್ಯೆಯ ಸರಣಿ ನಡೆಯುತ್ತಿದೆ. ಶ್ರೀ ಎಸ್.ಎಂ. ಕೃಷ್ಣ ರವರ ಕಾಂಗ್ರೆಸ್ ಸರ್ಕಾರ ಬಂದಮೇಲೆ ರಾಜ್ಯದಲ್ಲಿ ದಿನನಿತ್ಯ ಆತ್ಮಹತ್ಯೆಗಳು, ರೈತರ ಆತ್ಮಹತ್ಯೆ, ಕೃಪಾಂಕ ನೌಕರರ ಆತ್ಮಹತ್ಯೆ, ಅಕ್ಷರ ದಾಸೋಹ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ, ಆ ಮೇಲೆ ನೇಕಾರರ ಆತ್ಮಹತ್ಯೆ ಆಗುತ್ತಿದೆ.

(ಗೊಂದಲ)

ಇವರಿಗೆ ಸತ್ಯ ಹೇಳಿದರೆ ಆಗುವುದಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡಿಲ್ಲವೇ? ಆ ಮೇಲೆ ಸಿ.ಇ.ಟಿ. ಗೊಂದಲ. ಈ ಗೊಂದಲದಿಂದ ಇದಕ್ಕೆ ಸಂಬಂಧಿಸಿದ ವಿದ್ಯಾರ್ಥಿಗಳ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಇವತ್ತು ರಾಜ್ಯದಲ್ಲಿ ಆತ್ಮಹತ್ಯೆಗಳ ಸರಣಿ ನಡೆಯುತ್ತಿದೆ. ಸತ್ಯ ಹೇಳಿದರೆ ಇವರಿಗೆ ಉರಿ ಆಗುತ್ತದೆ. ನಾನು ಆಗಲೇ ಹೇಳಿದ ಹಾಗೆ 'ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಶೆಟ್ಟರ್‌ರವರು ಒಂದು ನಿಮಿಷ ಯೀಲ್ಡ್ ಆದರೆ ಒಂದು ಮಾತು ಹೇಳುತ್ತೇನೆ. ಅಕ್ಷರ ದಾಸೋಹ ಸ್ಕೀಂ ಇದರಿಂದ 50 ಲಕ್ಷ ಮಕ್ಕಳಿಗೆ ಅನುಕೂಲವಾಗತಕ್ಕಂಥ ಒಂದು ಯೋಜನೆಯಾಗಿದೆ. ಈಗ ಹೊಸದಾಗಿ ಪ್ರಾರಂಭ ಮಾಡಿರತಕ್ಕಂಥದ್ದಲ್ಲ. ತಮಗೆಲ್ಲಾ ಗೊತ್ತಿದ್ದ ಹಾಗೆ ಎರಡು ವರ್ಷದ ಹಿಂದೆಯೇ 7 ಜಿಲ್ಲೆಗಳಲ್ಲಿ ಲಿಟರಸಿ ಪರ್ಸಂಟೇಜ್ ಏನು ಕಡಿಮೆ ಇತ್ತೋ, ಅದು ಬಾಗಲಕೋಟೆ, ರಾಯಚೂರು ಗುಲ್ಬರ್ಗಾ, ಬೀದರ್, ಕೊಪ್ಪಳ ಈ ಜಿಲ್ಲೆಗಳಲ್ಲಿ ಇತ್ತು....

ಶ್ರೀ ಜಗದೀಶ್ ಶೆಟ್ಟರ್ : ಆಗ ಏನು ಅಸ್ತವ್ಯಸ್ತಗಳು ಆಯಿತು, ಏಕೆ ಹಾಗೆ ಆಯಿತು ಅದನ್ನೂ ಹೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 22 ಸಾವಿರ ಸೆಂಟರ್‌ಗಳಲ್ಲಿ ಒಂದೆರಡು ಸಣ್ಣಪುಟ್ಟ ಘಟನೆಗಳು ನಡೆದಿವೆ. ಒಟ್ಟು 16 ಘಟನೆ ನಡೆದಿದೆ. ಪೇಪರ್‌ನಲ್ಲಿ ರಿಪೋರ್ಟ್ ಆಗಿರುವಂಥದ್ದು, ರೇಡಿಯೋದಲ್ಲಿ ಹೇಳಿರುವುದು ನಿಮಗೆಲ್ಲಾ ಗೊತ್ತಿದೆ. only 16 cases out of 22000 centres

(ಗೊಂದಲ)

ಶ್ರೀ ಬಿ. ಸೋಮಶೇಖರ್ : ಈ ಸಬ್ಜೆಕ್ಟ್ ಅನ್ನು ಆ ಮೇಲೆ ತೆಗೆದುಕೊಳ್ಳೋಣ. ಇದನ್ನು ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ಆಗ ಏನೇನಾಗಿದೆ ಎನ್ನುವುದನ್ನು ಹೇಳುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ only 16 cases out of 22 thousand centres. out of 50 lakhs hardly 16 ಸ್ಥಳದಲ್ಲಿ ಇಂಥ ಕಂಪ್ಲೇಂಟ್ ಬಂದಿದೆ. ಅದನ್ನು ಸರಿಪಡಿಸತಕ್ಕಂಥ ವ್ಯವಸ್ಥೆಯೆಲ್ಲಾ ನಡೆದಿದೆ. ಆದರೆ ಈ ವ್ಯವಸ್ಥೆ 22 ಸಾವಿರ ಸೆಂಟರ್‌ನಲ್ಲಿ ನಡೆಯುವಾಗ 16ರಲ್ಲಿ ಮಾತ್ರ ಸಣ್ಣಪುಟ್ಟ ಘಟನೆ ನಡೆದಿದೆ. ಅದಕ್ಕೆ ಇವರು ಆ ರೀತಿ ಮಾತನಾಡಿದರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಅದರ ಬಗ್ಗೆ ನಾವು ಪ್ರತ್ಯೇಕವಾಗಿ ಡೀಟೈಲ್ ಆಗಿ ಮಾತನಾಡುವಾಗ ನಾವು ಹೇಳುತ್ತೇವೆ. ಏನೇನು ಅವ್ಯವಸ್ಥೆಯಾಗಿದೆ, ಯಾರ್ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅದನ್ನು ನೀವು ಹೇಳಬೇಕಾಗುತ್ತದೆ. ಏಕೆ ಹೀಗಾಯಿತೆಂಬ ಬಗ್ಗೆ ನೀವು ಹೇಳಬೇಕಾಗುತ್ತದೆ. ಯಾವ ರೀತಿಯಾಗಿದೆ ಪರಿಸ್ಥಿತಿ ಎಂದರೆ, ಆ ವಿದ್ಯಾರ್ಥಿಗಳ ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸುವುದಕ್ಕೆ ಅವರಿಗೆ ಮನಸ್ಸು ಬರುತ್ತಿಲ್ಲ. ತಮ್ಮ ಹುಡುಗರ ಜೀವ ಅಪಾಯದಲ್ಲಿದೆ ಎಂಬ ಹೆದರಿಕೆ ಅವರಲ್ಲಿ ಬರುತ್ತಿದೆ. ಅದರ ಬಗ್ಗೆ ನಾವು ಮಾತನಾಡಬೇಕಾಗುತ್ತದೆ. ಅದರ ಬಗ್ಗೆ ಮಾತನಾಡಲು ಬೇರೆ ರೂಪದಲ್ಲಿ ನೋಟೀಸ್ ಕೊಟ್ಟಿದ್ದೇವೆ. ಅದರ ಬಗ್ಗೆ ಮಾತನಾಡುತ್ತೇವೆ. ಈ ರೀತಿ ಇವತ್ತು ಪರಿಸ್ಥಿತಿ ಇರುವ ಸಂದರ್ಭದಲ್ಲಿ

ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) : ಕೊಪ್ಪಳದಲ್ಲಿ 2 ವರ್ಷಗಳ ಹಿಂದೆ ಇದು ಶುರುವಾಯಿತು.

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಹಾಗಾದರೆ, ಸತ್ತಿರುವುದನ್ನು ಮುಚ್ಚಿಹಾಕಿದ್ದೀರಾ?

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಕೊಪ್ಪಳದಲ್ಲಿ.....

ಶ್ರೀ ಹಂಪನಗೌಡ ಬಾದರ್ಲಿ : ಕೊಪ್ಪಳದಲ್ಲಿ 2 ವರ್ಷಗಳಿಂದ ಶುರು ಮಾಡಿದ್ದು ಎಂದು ಹೇಳುತ್ತಾರೆ. ಹಾಗಾದರೆ, ಇದನ್ನು ಯಾರಾದರೂ ಮಾಡಿಸಿದ್ದಾ?

ಶ್ರೀ ಜಗದೀಶ್ ಶೆಟ್ಟರ್ : ಈ ರೀತಿ ಬರಗಾಲದ ಪರಿಸ್ಥಿತಿ.....

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ರಮಾನಾಥ ರೈ ರವರು ಕೊಪ್ಪಳದ ಬಗ್ಗೆ ಪ್ರಸ್ತಾಪಿಸಿದ್ದಾರೆ. 2 ವರ್ಷಗಳ ಹಿಂದೆ ಬಿಸಿ ಊಟದ ಯೋಜನೆ ಅಲ್ಲಿ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ, ಅದನ್ನು ನಾವು ಒಪ್ಪುತ್ತೇವೆ. ಮೊನ್ನೆ ಕೊಪ್ಪಳ ಕ್ಷೇತ್ರದಲ್ಲಿ ಕಾತರಿಕಿ ಎಂಬ ಹಳ್ಳಿಯ ಪ್ರಾಥಮಿಕ ಶಾಲೆಯಲ್ಲಿ 35 ಮಕ್ಕಳು ಫುಡ್ ಪಾಯ್ಸನ್‌ನಿಂದ ಅಸ್ವಸ್ಥರಾದುದನ್ನು ವರದಿ ಮೂಲಕ

ಮತ್ತು ಮಾಧ್ಯಮದ ಮೂಲಕ ತಾವು ಕಂಡುಕೊಂಡಿದ್ದೀರೆಂದು ನಾನು ಭಾವಿಸುತ್ತೇನೆ. ಇದಕ್ಕೆ ಸರಿಯಾದ ವ್ಯವಸ್ಥೆಯನ್ನು ಮಾಡದಿರುವುದು ಅಥವಾ ಅಲ್ಲಿರುವವರು ಸರಿಯಾಗಿ ಜವಾಬ್ದಾರಿ ನಿರ್ವಹಿಸಿದ್ದು ಆಗುತ್ತಿಲ್ಲ. ಮಕ್ಕಳ ಜೀವನದ ಜೊತೆ ಚೆಲ್ಲಾಟ ಆಡುವ ವ್ಯವಸ್ಥೆಗೆ ಇವತ್ತು ಸರ್ಕಾರ ಹೋಗುತ್ತಿದೆ. ಅದಕ್ಕಾಗಿ ಆ ವಿಷಯ ಚರ್ಚೆಗೆ ಬಂದಾಗ ವಿವರವಾದ ವಿವರಣೆ ಕೊಡುತ್ತೇವೆ.

ಶ್ರೀ ಎನ್.ಎಸ್. ಭೋಸರಾಜು : 2 ವರ್ಷಗಳಿಂದ ಸತತವಾಗಿ ಒಳ್ಳೆಯ ರೀತಿಯಿಂದ 7 ಜಿಲ್ಲೆಗಳಲ್ಲಿ ನಡೆಯುತ್ತಿದೆ. 'ಇವತ್ತು ಏನೋ ಸಣ್ಣಪುಟ್ಟ ಕೆಲಸವಾದರೆ ಸರ್ಕಾರ ಚೆಲ್ಲಾಟವಾಡುತ್ತಿದೆ ಎಂದು ಹೇಳುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ ಎಂಬುದನ್ನು ವಿಚಾರ ಮಾಡಬೇಕು. 2 ವರ್ಷಗಳಿಂದ 7 ಜಿಲ್ಲೆಗಳಲ್ಲಿ 20 ಲಕ್ಷ ಮಕ್ಕಳು 11 ನೂರು ಶಾಲೆಗಳಲ್ಲಿ ಒಳ್ಳೆಯ ರೀತಿಯಿಂದ ನಡೆದುಕೊಂಡು ಬಂದಿದೆ ಎಂಬುದು ಅವರಿಗೂ, ನಮಗೂ, ಎಲ್ಲರಿಗೂ ಗೊತ್ತು. 2 ವರ್ಷಗಳ ನಂತರ ಒಂದೇ ಒಂದು ಕೊಪ್ಪಳದಲ್ಲಿ ಇನ್ಸಿಡೆಂಟ್ ಆಗಿದ್ದು. ಇದು ದುರ್ದೈವದ ಸಂಗತಿ. ಆದರೆ, ಆ ವಿಷಯದಲ್ಲಿ ಅವರು ಸರಿಯಾಗಿ ತಿಳಿದುಕೊಳ್ಳಬೇಕು. ಯಾವ ರೀತಿಯಿಂದ 2 ವರ್ಷಗಳಿಂದ ಸತತವಾಗಿ ನಡೆದಿದೆ ಎಂಬುದನ್ನು ಅವರು ತಿಳಿದುಕೊಳ್ಳಬೇಕು. ಯಾವ ರಾಜ್ಯ ಸರ್ಕಾರಗಳೂ ಚೆಲ್ಲಾಟವಾಡುತ್ತಿಲ್ಲ. ಅದನ್ನು ಗಮನಿಸಬೇಕು. ಉತ್ತಮವಾದ ರೀತಿಯಿಂದ ನಡೆದಿದೆ.

(ಗೊಂದಲ)

ಉಪಾಧ್ಯಕ್ಷರು : ಉಸ್ತುವಾರಿ ಮಂತ್ರಿಗಳು ಹೇಳುವುದಕ್ಕೆ ಬಿಡಿ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ಸಚಿವರು) : ಕೊಪ್ಪಳದಲ್ಲಿ 2 ವರ್ಷಗಳಿಂದ ಈ ಕಾರ್ಯಕ್ರಮ ನಡೆದಿದೆ. ಕರಡಿ ಸಂಗಣ್ಣನವರ ಕ್ಷೇತ್ರದಲ್ಲಿ ಮೊನ್ನೆ ಆದ ಘಟನೆ ಅವರಿಗೂ ಗೊತ್ತು. 135ರಲ್ಲಿ 30 ಹುಡುಗರಿಗೆ ತೊಂದರೆಯಾಗಿದೆ. ಅದು ಅಂಥ ಪರಿಣಾಮದ್ದಲ್ಲ. ಅವರೂ ಹೋಗು ನೋಡಿದ್ದಾರೆ. 30 ಹುಡುಗರೂ, ಎಲ್ಲರೂ ಚೆನ್ನಾಗಿದ್ದಾರೆ. ಮಧ್ಯಾಹ್ನದ ಊಟದಲ್ಲಿ ತೊಂದರೆಯಾಗಿದ್ದರೂ, ಯಾವುದೇ ಕಾರಣಕ್ಕೂ ಜಿಲ್ಲೆಯಲ್ಲಿ ಸರ್ಕಾರವಾಗಲಿ, ಜಿಲ್ಲಾಡಳಿತವಾಗಲಿ ಮಧ್ಯಾಹ್ನದ ಊಟದ ಸಂದರ್ಭದಲ್ಲಿ ಮಕ್ಕಳೊಂದಿಗೆ ಚೆಲ್ಲಾಟವಾಡುತ್ತಿಲ್ಲ. ಅದನ್ನು ವಾಪಸ್ಸು ತೆಗೆದುಕೊಳ್ಳಿ. ಏಕೆಂದರೆ, ಸರ್ಕಾರ ಚೆನ್ನಾಗಿ ಕೆಲಸ ಮಾಡುತ್ತಿದೆ. ಇದು ಸರ್ಕಾರದಲ್ಲಿ ಒಳ್ಳೆಯ ಪ್ರೋಗ್ರಾಂ ಇದೆ. ಸುಮಾರು 50 ಜನಸಂಖ್ಯೆ ಇರುವ ವಿದ್ಯಾರ್ಥಿಗಳಿಗೆ ಈ ಕಾರ್ಯಕ್ರಮವನ್ನು ಮಾಡಿರುವುದು ವಿರೋಧ ಪಕ್ಷದವರಿಗೆ ಒಂದು ಸಂಕಟವಾಗಿದೆ ಎಂದು ಹೇಳುತ್ತೇನೆ.

(ಗೊಂದಲ)

ಶ್ರೀ ಕರಡಿ ಸಂಗಣ್ಣ ಅಮರಪ್ಪ : ವಾಪಸ್ಸು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. 35 ಮಕ್ಕಳು ಅಸ್ವಸ್ಥರಾಗಿರುವುದನ್ನು ನಾವು ನೋಡಿದ್ದೇವೆ. ಏಕೆಂದರೆ, ಅವರೂ ಕೂಡ ಆ ಮಕ್ಕಳು ಆಸ್ಪತ್ರೆಗೆ ಅಡ್ಮಿಟ್ ಆಗಿರುವುದನ್ನು ನೋಡಿದ್ದಾರೆ. ಅವರಿಗೆ ಟ್ರೀಟ್‌ಮೆಂಟ್ ಮಾಡಿಸಿದ್ದಾರೆ. ಅವರು ಸಾಯಬೇಕಾಗಿತ್ತು ಎಂಬುದು ನಿಮ್ಮ ಉತ್ತರವೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಸತತವಾಗಿ ಒಂದು ವರ್ಷದಿಂದ ಚೆನ್ನಾಗಿ ನಡೆಯುತ್ತಿರುವ ಯೋಜನೆ ಬಗ್ಗೆ ಮಾತನಾಡುತ್ತಿಲ್ಲ. ಕೇವಲ ಒಂದಕ್ಕೆ ವಿರೋಧ ಪಕ್ಷದವರು ಇಷ್ಟು ಮಾತನಾಡುತ್ತಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಜೀವನದ ಪ್ರಶ್ನೆ ಇದೆ. ಒಂದಾಗಲಿ, 35 ಮಕ್ಕಳಾಗಲಿ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ : ಆಗಬಾರದು. ಆ ರೀತಿ ಮುಂದೆ ಆಗದ ಹಾಗೆ ನೋಡಿಕೊಳ್ಳುವುದು ನಮ್ಮ ಕರ್ತವ್ಯ. ನೋಡಿಕೊಳ್ಳುತ್ತೇವೆ.

ಶ್ರೀ ರೇವುನಾಯಕ್ ಬೆಳಮಗಿ : ನನ್ನ ಕ್ಷೇತ್ರವಾದ ಆಳಂದ ತಾಲ್ಲೂಕಿನ ನರೋಣ ಗ್ರಾಮದಲ್ಲಿ ಆಹಾರದಲ್ಲಿ ಒಂದು ಹಲ್ಲಿ ಬಿದ್ದಿತ್ತು. ಇದು ನಿರ್ಲಕ್ಷದಿಂದಾಗಿತ್ತು. ಒಬ್ಬ ಹುಡುಗ ಹಲ್ಲಿ ಬಿದ್ದಿದ್ದನ್ನು ತೋರಿಸಿದ್ದರಿಂದ 80ಕ್ಕಿಂತ ಹೆಚ್ಚು ಹುಡುಗರು ವಾಂತ ಭೇದಿ ಮಾಡಿಕೊಂಡು ದವಾಖಾನೆಗೆ ಹೋದರು, ಅಲ್ಲಿಗೆ ಡಿಸಿ, ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳೂ ಬಂದಿದ್ದರು. ಚೌಕಾಶಿ ಮಾಡಿದಾಗ ಸರಿಯಾಗಿ ವ್ಯವಸ್ಥೆ ಮಾಡದಿರುವ ಕಾರಣ ಹಲ್ಲಿ ಬಿದ್ದಿತ್ತು. ಅದರಿಂದ ಎಲ್ಲರೂ ದವಾಖಾನೆಗೆ ಹೋಗಿದ್ದಾರೆಂಬುದು ತಿಳಿಯಿತು. ಈ ಘಟನೆ ನಮ್ಮಲ್ಲಿ ನಡೆದಿದೆ.

ಉಪಾಧ್ಯಕ್ಷರು : ಅವೆಲ್ಲಾ ಆಕಸ್ಮಿಕಗಳು.

(ಗೊಂದಲ)

ಶ್ರೀ ಎಸ್. ಸುರೇಶ್‌ಕುಮಾರ್ : ಸೋಮವಾರಕ್ಕೆ ಮುಂದೂಡಿದರೆ ಒಳ್ಳೆಯದು. ಇನ್ನೂ ಸುಮಾರು ಹೊತ್ತು ಆಗುತ್ತದೆ. ಇಲ್ಲಿ ಮಧ್ಯಾಹ್ನದ ಬಿಸಿ ಊಟವನ್ನು ನಮಗೆ ಯಾರೂ ಹಾಕುವುದಿಲ್ಲ.

(ಗೊಂದಲ)

5. ಪ್ರಕಟಣೆಗಳು

ಉಪಾಧ್ಯಕ್ಷರು : ದಿ: 10.7.03ರ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 12 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 57 ಪ್ರಶ್ನೆಗಳ ಪೈಕಿ 44 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ** (ಅನುಬಂಧ II)

ಪ್ರಕಟಣೆ (i)

ಸದನದಲ್ಲಿ ಉತ್ತರಿಸುವ ಹಾಗೂ ಚುಕ್ಕೆರಹಿತ ಗುರುತಿನ ಪ್ರಶ್ನೆಗಳನ್ನು ಸಭೆಯ ಮುಂದೆ ಮಂಡಿಸುವುದು

ಪ್ರಕಟಣೆ (ii)

ದಿನಾಂಕ 9ನೇ ಜುಲೈ, 2003ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ಸಭೆಯಲ್ಲಿ ವಿಧಾನಸಭೆಯು ಕಾರ್ಯಕಲಾಪಗಳನ್ನು ಈ ಕೆಳಕಂಡಂತೆ ನಡೆಸಲಾಗುವುದೆಂದು ತೀರ್ಮಾನಿಸಲಾಯಿತು.

1. ದಿನಾಂಕ 10ನೇ ಜುಲೈ, 2003 ರಿಂದ ಪ್ರತಿದಿನ ಬೆಳಿಗ್ಗೆ 11.00 ಗಂಟೆಗೆ ಸಭೆ ಸೇರಿ ಸಾಯಂಕಾಲ 6.00 ಗಂಟೆಯವರೆಗೆ ಕಾರ್ಯಕಲಾಪಗಳು ನಡೆಯಲಿದೆ.
2. ಪ್ರತಿದಿನ ಮಧ್ಯಾಹ್ನ 1.30 ರಿಂದ 2.30ರ ವರೆಗೆ ಊಟದ ವಿರಾಮ.
3. ದಿನಾಂಕ 28ನೇ ಜುಲೈ, 2003ರಂದು 2003–2004ನೇ ಸಾಲಿನ, ಮುಖ್ಯಮಂತ್ರಿಯವರಿಗೆ ಸಂಬಂಧಿಸಿದ ಇಲಾಖೆಯ ಅಭಿಯಾಚನೆಗಳ ಮೇಲಿನ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರ.
4. ಈ ಮಧ್ಯೆ ಆಧ್ಯಾದೇಶಗಳಿಗೆ ಸಂಬಂಧಿಸಿದ ಅತೀ ಜರೂರು ವಿಧೇಯಕಗಳನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.

ಇದಕ್ಕೆ ಸದನದ ಸಹಮತಿಯಿದೆಯೆಂದು ಭಾವಿಸುತ್ತೇನೆ.